
ಕರ್ನಾಟಕ ಲಲಿತಕಲಾ ಅಕಾಡೆಮಿ

ಚಿತ್ರಕಲಾವಿದ

ಎಮ್.ಜಿ.ವಾಚೇದಮಠ

ಶಂಕ್ರಪ್ಪ.ಎಂ.ಕುಂದಗೋಳ



ಚಿತ್ರಕಲಾವಿದ ಎಮ್.ಜಿ. ವಾಚೇದಮಠ

Artist M.G. Vachedmath

ಶಂಕ್ರಪ್ಪ ಎಂ. ಕುಂದಗೋಳ

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560 002
ದೂರವಾಣಿ : 080-22480297

Artist M.G. Vachedmath: A biography by Shankrappa M. Kundagola Published by H.G. Vijayalakshmi, Registrar, Karnataka Lalithakala Academy, Kannada Bhavana, J.C. Road, Bengaluru-560 002
Ph : 080-22480297

ಮುದ್ರಣ : 2010
ಪುಟಗಳು : 6+42+20 = 68
ಪ್ರತಿಗಳು : 1000


ಬೆಲೆ : 80/–

ಆಂಗ್ಲ ಅನುವಾದ : ಪ್ರೊ. ಎಚ್.ಎಸ್. ಹರಿಶಂಕರ್

ಸಮನ್ವಯಕಾರರು : ಎಸ್.ಎಂ. ಜಂಬುಕೇಶ್ವರ

ಪ್ರಕಾಶಕರು :
ಎಚ್.ಜಿ. ವಿಜಯಲಕ್ಷ್ಮಿ
ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು–560 002

ಮುದ್ರಕರು :
ಗಾಯತ್ರಿ ಎಂಟರ್‌ಪ್ರೈಸಸ್
285/F6, 5ನೇ ವೆಸ್ಟ್ ಕ್ರಾಸ್, ಉತ್ತರಾದಿಮಠದ ರಸ್ತೆ, ಮೈಸೂರು.



ಅಧ್ಯಕ್ಷರ ಮಾತು


ಜಗತ್ತಿನ ವ್ಯಾಪಕಜ್ಞಾನ, ತಂತ್ರಜ್ಞಾನ ಮತ್ತು ಶೋಧನೆ-ಚಿಂತನೆಗಳನ್ನು ಸತ್ವಪೂರ್ಣವಾಗಿ ದಾಖಲಿಸುವ, ಓದುಗರ ಕಲಾ-ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ಕೆಲಸ ನಮ್ಮ ಅಕಾಡೆಮಿಯ ಮೂಲಕ ನಡೆಯುತ್ತಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮೂಲಕ ವಿತರಣಾ ಪ್ರಕ್ರಿಯೆಗಳನ್ನು ಅಕಾಡೆಮಿಯ 'ಕಲಾವಾರ್ತೆಯ' ಮೂಲಕ ಪ್ರಯತ್ನಿಸುತ್ತಿದೆ. ಈಗಾಗಲೇ ವೈವಿಧ್ಯಮಯ ಮತ್ತು ವೈಶಿಷ್ಟ್ಯಪೂರ್ಣ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಅಂತರಂಗ ಹಾಗೂ ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ ಎಂದು ಹೇಳಬಯಸಿದರೆ ಅತಿಶಯೋಕ್ತಿಯಾಗಲಾರದು.

ಕಲೆ ಎಲ್ಲರನ್ನು ಕೈಬೀಸಿ ಕರೆಯುತ್ತದೆ, ಆದರೆ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ ಎಂಬ ಮಾತು ಚರ್ಚೆಯಲ್ಲಿ ಇದೆ. ಈ ಮಾತು ಕಲೆಯ ಮಹತ್ವ, ವ್ಯಾಪ್ತಿ ಹಾಗೂ ವೈಶಿಷ್ಟ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಮತ್ತು ಶಕ್ತಿವತ್ತಾಗಿ ಅಭಿವ್ಯಕ್ತಿಸುತ್ತದೆ. ಒಂದರ್ಥದಲ್ಲಿ ಕಲೆ ತನ್ನ ಸತ್ವದ ಅಭಿವ್ಯಕ್ತಿಗಾಗಿ ಎಲ್ಲರನ್ನು ಆಹ್ವಾನಿಸಿದರೂ ಅದರ ಮೂಲ ತತ್ವವನ್ನು ಅರಿತು, ಅನುಭವಿಸಿ, ಧ್ಯಾನಿಸಿ, ಅನುಸಂಧಾನ ಮಾಡಿದ ನಂತರ ಅದರ ಆರಾಧನೆಯಲ್ಲಿ ತೊಡಗಿ ತಮ್ಮನ್ನು ಸಂಪೂರ್ಣವಾಗಿ ಅದಕ್ಕೆ ಅಂಟಿಕೊಂಡವರು ಬಹಳ ವಿರಳವೆಂದೇ ಹೇಳಬಹುದು. ಆದ್ದರಿಂದಲೆ ಕಲಾ ಕ್ಷೇತ್ರದಲ್ಲಿ ಪರಿಣಿತಿಯನ್ನು ಪಡೆಯುವವರು ಆ ಮೂಲಕ ವಿಭಿನ್ನ ಹಾಗೂ ವೈಶಿಷ್ಟ್ಯಪೂರ್ಣ ಕಲಾಕೃತಿಗಳನ್ನು ರಚಿಸುವವರ ಸಂಖ್ಯೆ ಕಡಿಮೆಯೆಂದೇ ತಿಳಿಯಬೇಕಾಗುತ್ತದೆ.

ಇಷ್ಟಾದರೂ ನಮ್ಮ ಪುರಾಣಗಳು, ಇತಿಹಾಸಗಳು, ಪುರಾತತ್ವ ದಾಖಲೆಗಳು ಭಾರತದಲ್ಲಿ ಅನಾದಿಕಾಲದಿಂದಲೂ; ಮಹತ್ವದ ಕಲಾಸಾಧಕರು ಇದ್ದುದನ್ನು ಮತ್ತು ಅಪೂರ್ವ ಕಲಾಕೃತಿಗಳನ್ನು ರಚಿಸಿದ್ದನ್ನು ಸಾದರಪಡಿಸುತ್ತವೆ. ಆಧುನಿಕ ಭಾರತವೂ ಸಹ ಇಂಥಹ ಸಾಕಷ್ಟು ಕಲಾವಿದರನ್ನು ಸೃಷ್ಟಿಸಿದೆ. ಭಾರತೀಯ ಪಾರಂಪರಿಕ ಕಲೆಯ ಮಹೋನ್ನತಿಯನ್ನು ಮೈಗೂಡಿಸಿಕೊಳ್ಳುವುದರ ಜೊತೆಗೆ ಅನೇಕ ಕಾಲಘಟ್ಟಗಳಲ್ಲಿ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಮೈದೋರಿದ ಹೊಸ ಹೊಸ ಕಲಾಪಂಥಗಳನ್ನು, ಚಿಂತನೆಗಳನ್ನು, ತಂತ್ರಮಾಧ್ಯಮಗಳನ್ನು ರೂಢಿಸಿಕೊಂಡು ಬಹು ಪ್ರಸಿದ್ಧಿಯನ್ನು ಪಡೆದ ಕಲಾವಿದರು ನಮ್ಮಲ್ಲಿ ಇರುವುದು ಅಭಿಮಾನಪಡುವಂಥದ್ದು. ಆದರೆ ಈ ಕಲಾವಿದರ ಜೀವನ ಮತ್ತು ಸಾಧನೆಗಳ ಬಗೆಗಿನ ವಿದ್ವತ್ ಹಾಗೂ ಅಧಿಕೃತ ದಾಖಲೆಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆಯದಿರುವುದು ವಿಷಾದದ ಸಂಗತಿ. ಮತ್ತೊಂದೆಡೆ ಈ ಕ್ಷೇತ್ರದ ಮಹಾಸಾಧಕರನ್ನು, ಅವರ ಸಿದ್ಧಿ ಸಾಧನೆಗಳನ್ನು ಜೀವನದ ಏರಿಳಿತಗಳನ್ನು ಮತ್ತು ಅನುಭವಿಸಿದ ಸಾಕಷ್ಟು ಸಂತೋಷಗಳನ್ನು ಪರಿಚಯಿಸುವ ಗ್ರಂಥಗಳು ಅತ್ಯಲ್ಪವೇ ಎಂದು ಹೇಳಬಹುದು.

ತಮ್ಮೆಲ್ಲರಿಗೂ ತಿಳಿದಿರುವಂತೆ ಕರ್ನಾಟಕ ಲಲಿತಕಲಾ ಅಕಾಡೆಮಿಯು ವಿಶ್ವಭಾಷೆಯಾದ ದೃಶ್ಯಜ್ಞಾನವನ್ನು ಕನ್ನಡ ಭಾಷೆಯ ಮೂಲಕ ಪ್ರಚುರಗೊಳಿಸುವ ಕಾರ್ಯಕವನ್ನು ಪ್ರಾಯೋಗಿಕ ಚಟುವಟಿಕೆಗಳ ನಡುವೆಯೂ ಅತ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಶ್ರೀ ಶಂಕ್ರಪ್ಪ ಎಂ. ಕುಂದಗೋಳ ಅವರು ರಚಿಸಿದ ಚಿತ್ರಕಲಾವಿದ ಎಮ್.ಜಿ. ವಾಚೇದಮಠ ಇವರ ಕೃತಿಯನ್ನು ಅಕಾಡೆಮಿಯು ಪ್ರಕಟಿಸಲು ಹೆಮ್ಮೆಪಡುತ್ತದೆ. ಕೆಲವೇ ಮಾತುಗಳಲ್ಲಿ ಕಲಾವಿದರ ಸಾಧನೆಗಳನ್ನು ಬಿಂಬಿಸುವ ಕೌಶಲ ಇಲ್ಲಿ ಸುವ್ಯಕ್ತವಾಗಿವೆ. ಈ ಬರಹಗಳು ಕಲಾ ವಿದ್ಯಾರ್ಥಿಗಳಿಗೂ ಕಲಾಸಕ್ತರಿಗೂ ಬಹು ಉಪಯುಕ್ತವಾಗಿವೆ. ಇಂತಹ ವಿಶಿಷ್ಟ ಕೃತಿಯನ್ನು ಅಕಾಡೆಮಿಗೆ ಬರೆದುಕೊಟ್ಟ ಇವರಿಗೆ ನಮ್ಮ ಅಕಾಡೆಮಿಯ ಪರವಾಗಿ ಅಭಿನಂದನೆಗಳು ಸಲ್ಲುತ್ತವೆ.

ನಾಡೋಜ ಜೆ.ಎಸ್. ಖಂಡೇರಾವ್



ಲೇಖಕರ ಅನಿಸಿಕೆ

ಕರ್ನಾಟಕ ಲಲಿಕಲಾ ಅಕಾಡೆಮಿ ದೃಶ್ಯಕಲೆ ಸಂಸ್ಕೃತಿಯ ಉಳಿವಿಗಾಗಿ ಮತ್ತು ಅದನ್ನು ಇನ್ನಷ್ಟು ಹರುವಿಕೆಗಾಗಿ ಜನ್ಮತಾಳಿದ ಸಂಸ್ಥೆ. ಅದು ವಿಶೇಷವಾಗಿ ಯೋಜನೆಗಳನ್ನು ರೂಪಿಸಿ ಕಾರ್ಯಾಚರಣೆಯಲ್ಲಿ ತರುವ ಮೂಲಕ ಈ ಕ್ಷೇತ್ರದ ಸರ್ವಾಂಗೀಣ ಬೆಳವಣಿಗೆಯನ್ನು ಮಾಡುವುದು ಇದರ ಮಹತ್ವದ ಉದ್ದೇಶವಾಗಿದೆ. ಅದರಲ್ಲಿ ಪುಸ್ತಕ ಪ್ರಕಟನಾ ಯೋಜನೆ ಬಹಳ ಮಹತ್ವದ ಯೋಜನೆಯಾಗಿದ್ದು, ಇದರ ಮೂಲಕ ದೃಶ್ಯಮೂಲದ ಸಂಸ್ಕೃತಿಯನ್ನು ಅಕ್ಷರ ಮೂಲದ ಸಂಸ್ಕೃತಿಯನ್ನಾಗಿಸಿ ದಾಖಲೀಕರಣ ಮಾಡುವಂತಹ ಪ್ರಕ್ರಿಯೆ ಇಲ್ಲಿ ನಡೆಯುತ್ತಿದೆ. ಇದು ಮುಂದಿನ ತಲೆಮಾರಿನ ಜನರಿಗೆ ನಾವು ಅವಶ್ಯವಾಗಿ ಮಾಡಬೇಕಾದ ಕಾರ್ಯವಾಗಿದೆ.

ಅಕಾಡೆಮಿ ಚಿತ್ರಕಲೆ, ಚಿತ್ರಕಲಾವಿದರು ಕುರಿತಾದ ಗ್ರಂಥಗಳನ್ನು ಈಗಾಗಲೇ ನಿರಂತರವಾಗಿ ಪ್ರಕಟಿಸುತ್ತಾ ಬಂದಿದೆ. ಈ ಪರಂಪರೆಯ ಹಿನ್ನೆಲೆಯಲ್ಲಿ ಚಿತ್ರಕಲಾವಿದ ಶ್ರೀ ಎಮ್.ಜಿ. ವಾಚೇದಮಠ ಅವರ ಕುರಿತು ನನಗೆ ಪುಸ್ತಕ ಬರೆಯಲು ಅಕಾಡೆಮಿಯ ಅಧ್ಯಕ್ಷರು ಮತ್ತು ಸರ್ವಸದಸ್ಯರು ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

ಅವರ ಕುರಿತು ಪುಸ್ತಕ ಈ ಹಿಂದೆಯೇ ಬರಬೇಕಾಗಿತ್ತು. ಆದರೆ ಈಗ ಅಕಾಡೆಮಿಯ ಸದಿಚ್ಛೆಯ ಮೇರೆಗೆ ಪುಸ್ತಕ ಬೆಳಕು ಕಾಣುತ್ತಿರುವುದು ನನಗೆ ಸಂತೋಷವನ್ನು ತಂದಿದೆ.

ನನ್ನ ಕಣ್ಣು ಮನಸ್ಸುಗಳು ದೃಶ್ಯಕಲೆಯ ಹಲವು ಆಯಾಮ, ಸಾಧ್ಯತೆಗಳನ್ನು ಗ್ರಹಿಸಲಾರಂಭಿಸಿದ ಸಂದರ್ಭದ ಆರಂಭದಲ್ಲಿಯೇ

ಆಕರ್ಷಿಸಿದವರು ಎಮ್.ಜಿ. ವಾಚೇದಮಠ. ೧೯೭೫-೮೫ ದಶಕದಲ್ಲಿ ಚಿತ್ರಕಲಾ ಶಿಕ್ಷಕರಾಗಿ ಜನಪ್ರಿಯತೆ ಹೊಂದಿದ್ದ ಇವರು, ಆ ಸಂದರ್ಭದಲ್ಲಿ ರಚಿತಗೊಂಡ ಕಲಾಕೃತಿಗಳು ಹಲವೆಡೆ ನನ್ನನ್ನು ಕೌತುಕದಿಂದ ನೋಡಿ ಅನುಭವಿಸುವಂತೆ ಮಾಡಿವೆ. ನನ್ನ ಬಿಡುವಿಲ್ಲದ ಓಡಾಟದ ದಿನಚರಿಯ ಮಧ್ಯ ವಾಚೇದಮಠ ಅವರ ಕಲಾಕೃತಿಗಳನ್ನು ನೋಡಿ, ಚರ್ಚಿಸುವ ಅವಕಾಶ ಆಗಾಗ ಸಾಧ್ಯವಾಗುತ್ತಿತ್ತು. ಅವರ ರೇಖಾ ಚಿತ್ರಗಳನ್ನು ನೋಡಿದಾಕ್ಷಣ ನೆನಪಾಗುವುದು ಶ್ರೀ ಕೆ.ಕೆ. ಹೆಬ್ಬಾರರ ಚಿತ್ರಗಳು. ನಮ್ಮ ಅತಿ ಮುಖ್ಯ ಚಿತ್ರಕಲಾವಿದರಲ್ಲಿ ಒಬ್ಬರಾಗಿರುವ ಇವರು ಹಲವು ಮುಖಗಳೊಂದಿಗೆ ಮುಖಾಮುಖಿಯಾಗುವ ಸೀಮಿತ ಪ್ರಯತ್ನ.

ಸಾಮಾನ್ಯರಿಗೆ ನಮ್ಮ ಬಹುಮುಖ್ಯ ಚಿತ್ರಕಲಾವಿದರನ್ನು ಪರಿಚಯಿಸುವ ಅಕಾಡೆಮಿ ಉದ್ದೇಶವನ್ನು ಗಮನದಲ್ಲಿಟ್ಟು ಈ ಪುಸ್ತಕವನ್ನು ಅಕಾಡೆಮಿಯ ಸಿಮಿತ ಚೌಕಟ್ಟಿನಲ್ಲಿ ರೂಪಿಸಿದ್ದು, ಶ್ರೀ ವಾಚೇದಮಠ ಇವರ ಹಲವು ಮಜಲುಗಳ ಅಭಿವ್ಯಕ್ತಿಯ ಸಿಂಹಾವಲೋಕನದ ಜೊತೆಗೆ ಗ್ರಹಿಕೆಯ ಹಲವು ಒಳನೋಟಗಳನ್ನು ನೋಡಲು ಪ್ರಯತ್ನಿಸಲಾಗಿದೆ. ನನ್ನ ಈ ಪ್ರಯತ್ನಗಳಿಗೆ ನಾನು ನಿರೀಕ್ಷಿಸಿದಾಗಲೆಲ್ಲಾ ನನ್ನೊಂದಿಗಿನ ಮುಖಾಮುಖಿಗೆ ವಾಚೇದಮಠ ರವರು ಬಿಡುವು ಮಾಡಿಕೊಂಡು ಸಹಕರಿಸಿದ್ದಾರೆ.

ಶ್ರೀ ವಾಚೇದಮಠ ಮತ್ತು ಅವರ ಕುಟುಂಬದವರು ನಾನು ಕ್ಷೇತ್ರಕಾರ್ಯಕ್ಕೆ ಹೋದಾಗಲೆಲ್ಲಾ ನನಗೆ ಸಹಕರಿಸಿದ್ದಾರೆ. ಪ್ರಕಟಣೆಯ ಸಂದರ್ಭದಲ್ಲಿ ಕರಡು ಪ್ರತಿ ತಿದ್ದಿದ ಗುರುಗಳಾದ ಶ್ರೀ ಬಿ.ಎಂ. ಪಾಟೀಲರಿಗೆ ಹಾಗೂ ನನಗೆ ಎಲ್ಲ ಕೆಲಸ ಕಾರ್ಯಗಳಿಗೆ ಸ್ಫೂರ್ತಿ ನೀಡುತ್ತಿರುವ ಗುರುಗಳಾದ ಡಾ. ಎಸ್.ಸಿ. ಪಾಟೀಲ ಅವರಿಗೆ, ಛಾಯಾಚಿತ್ರ ಮಾಡಿಕೊಟ್ಟ ಮಿತ್ರ ಎನ್.ಎಂ. ಅಂಗಡಿ ಅವರಿಗೆ ಹಾಗೂ ಅಕಾಡೆಮಿಯ ಎಲ್ಲಾ ಸದಸ್ಯರಿಗೆ ಹಾಗೂ ಸಿಬ್ಬಂದಿಗಳಿಗೆ ಕೃತಜ್ಞತೆಗಳು.

– ಶಂಕ್ರಪ್ಪ ಎಂ. ಕುಂದಗೋಳ

ಚಿತ್ರಕಲಾವಿದ ಎಮ್. ಜಿ. ವಾಚೇದಮಠ

ತನ್ನ ಪರಿಸರಕ್ಕೆ ತೀಕ್ಷ್ಣವಾಗಿ, ವೈಚಾರಿಕವಾಗಿ ಸ್ಪಂದಿಸುವ ಕಲಾವಿದರಲ್ಲಿ ಶ್ರೀ ಎಂ. ಜಿ. ವಾಂಚೇದಮಠರು ಅಗ್ರಗಣ್ಯರೆಂದು ಹೇಳಲು ಯಾವ ಅನುಮಾನವೂ ಬೇಡ. ಕಳೆದೆರಡು ವರ್ಷಗಳಿಂದ ನಾನು ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯರಾದ ಮೇಲೆ ಅವರ ನಿಕಟ ಸಹವಾಸ ಲಭ್ಯವಾಗಿ ಅವರು ಬರೆಯುವ ಚಿತ್ರಗಳನ್ನು ನೋಡುವ ಸದಾವಕಾಶ ನನಗೆ ದೊರಕಿತು.

ಕಲಾವಿದನೊಬ್ಬ ನಾಲ್ಕಾರು ದಶಕಗಳ ಅಭಿವ್ಯಕ್ತಿಯ ಸಾರಸಂಗ್ರಹವನ್ನು ಕೇವಲ ಒಂದೇ ಒಂದು ಕೃತಿಯು ಹಿಡಿದಿರಿಸುವುದು ತೀರ ಅಪರೂಪ. ನಿರಂತರವಾಗಿ ಮೊದಲಿನಿಂದ ಕೊನೆಯವರೆಗಂತೂ ಒಂದೇ ಶೈಲಿಯಲ್ಲಿ ಕೃತಿರಚನೆ ಮಾಡುವವರ ಕಥೆಯೇ ಬೇರೆ. ಅಂತಲ್ಲಿ ಆ ಕಲಾವಿದನ ಒಂದೇ ಒಂದು ಕೃತಿಯು ಆತನ ಇತರ ಎಲ್ಲಾ ಕಲಾಕೃತಿಗಳಿಗೆ ಸಂಕೇತವಾದರೂ ಅದು ಒಂದು ರೂಪಕವಾಗಿ ಸಫಲವಾಗಲಾರದು. ಏಕೆಂದರೆ ಇಂತಹ ಸಂಕೇತವು ಒಂದು ಕಲಾಕೃತಿ ಸರಣಿಯೊಂದರ ಹಾಗೂ ಕಲಾವಿಧಾನ ಒಟ್ಟಾರೆ ಸಾಧನೆಯ ಇತಿಮಿತಿಗಳಿಗೂ ಸಂಕೇತವಾಗಿ ಉಳಿದು ಬಿಡುವ ಅಪಾಯವಿದೆ.

ಹೀಗೆ ಒಂದೇ ಶೈಲಿಗೆ ಅಂಟಿಕೊಳ್ಳದೆ ಚಿತ್ರಕಲಾಕ್ಷೇತ್ರದಲ್ಲಿ ವಿವಿಧ ರೀತಿಯ ಕಲಾಕೃತಿಗಳನ್ನು ಸನ್ನಿವೇಶಕ್ಕನುಗುಣವಾಗಿ ಕೃತಿ ರಚಿಸುವ ಗುಣಉಳ್ಳುವರು ಎಂ. ಜೆ. ವಾಚೆದಮಠ ಅವರು. ಇವರು ಮೂಲತಃ ಲಕ್ಷ್ಮೇಶ್ವರದವರು. ಶ್ರೀ ರೇಣುಕಾಚಾರ್ಯ ಬಾಳಿಹಳ್ಳಿ ಸಿಂಹಾಸನ ಮೂಲ ಪಡುವಡಿ ಬಗಿ, ಇವರ ಅಡ್ಡ ಹೆಸರು ವಾಚೇಶ್ವರಮಠ, ಕ್ರಮೇಣ ಬಳಕೆಯಲ್ಲಿ ವಾಚೇದಮಠವಾಗಿ ಪರಿವರ್ತನೆಗೊಂಡಿತು. ಕಾರಣಾಂತರಗಳಿಂದ ಇವರ ಮನೆತನ ಲಕ್ಷ್ಮೇಶ್ವರದಿಂದ ಶಿರಹಟ್ಟಿ ತಾಲೂಕು ಬಿಜ್ಜೂರಿಗೆ ಬಂದು ನೆಲೆಯೂರಿತು.

ಇವರ ತಂದೆ ಗುರುಪಾದಯ್ಯ ಮೂಲತಃ ಕೃಷಿಕರು ಇವರಿಗೆ ಮೂರು ಜನ ಪತ್ನಿಯರು ಮೊದಲು ಮತ್ತು ಎರಡನೆ ಮದುವೆ ಆದ ಹೊಸತನದಲ್ಲೆ

ತೀರಿಹೋದರು. ಗುರುಪಾದಯ್ಯನವರು ಸಂಸಾರಿಕ ಜೀವನದಲ್ಲಿ ಬಹಳ ವೇದನೆಯನ್ನು ಪಟ್ಟವರು. ಮತ್ತೆ ಕುಟುಂಬದವರ ಒತ್ತಾಯಕ್ಕೆ ಮನಿದು ಅಕ್ಕನ ಮಗಳಾದ ಫಕ್ಕೀರವ್ವಳನ್ನು ತಮ್ಮ ಮೋವತ್ತೈದನೆ ವಯಸ್ಸಿನಲ್ಲಿ ಮದುವೆಯಾದರು. ನಂತರದಲ್ಲಿ ಇವರಿಗೆ ನಾಲ್ಕು ಮಕ್ಕಳು ಜನಿಸಿದರು. ಅವರಲ್ಲಿ ನಾಲ್ಕನೆಯ ಮಗ ಮುರಗಯ್ಯ. ಇವರು 1934 ರಲ್ಲಿ ಶಿರಹಟ್ಟಿ ತಾಲೂಕು ಕೋಗನೂರ ಹಿರೇಮಠ ಮನೆಯಲ್ಲಿ ಜನಿಸಿದರು. ಜೋಗಯ್ಯ, ಸಿದ್ದರಾಮಯ್ಯ ಇವರ ಹಿರಿಯ ಸಹೋದರರು, ಪಾರ್ವತೆವ್ವ ಹಿರಿಯ ಸಹೋದರಿ.

ಇವರ ಮನೆತನ ಕೃಷಿ ಕುಟುಂಬವಾಗಿದ್ದರಿಂದ ಹಳ್ಳಿಯ ವಾತಾವರಣ, ಪ್ರಕೃತಿ ಇವರ ಮೇಲೆ ಪ್ರಭಾವ ಬೀರಿತಲ್ಲದೆ ಮಣ್ಣೆತ್ತಿನ ಅಮವಾಸೆ ಸಂದರ್ಭದಲ್ಲಿ ಹುತ್ತದ ಮಣ್ಣು ತಂದು ಅವರ ತಂದೆಯವರು ಮಾಡಿದ ಹಾಗೆ ಎತ್ತುಗಳ ಮಾಡಲು ಪ್ರಯತ್ನಿಸುತ್ತಿದ್ದರು. ಇವರ ತಾಯಿಯವರು ಸೀರೆಯ ಮೇಲೆ ಉತ್ಕೃಷ್ಟ ಕಸೂತಿಗಳನ್ನು ಹೆಣೆಯುತ್ತಿದ್ದರು. ಕಸೂತಿಯಲ್ಲಿನ ಕಲಾಕೃತಿಗಳು ಇವರ ಮನಸ್ಸಿನ ಮೇಲೆ ಪ್ರಭಾವ ಬೀರಿದರು.

ವಾಚೇದಮಠರು ಬಾಲ್ಯದಲ್ಲಿ ಸಾಮಾನ್ಯ ಜನರಂತೆ ದೃಶ್ಯ ಆಶ್ವಾದನೆ ಮಾಡುತ್ತಿರಲಿಲ್ಲ. ತಮಗೆ ಅರಿವಿಲ್ಲದೆ ನೈಜ ಚಿತ್ರಕಲೆಯತ್ತ ಒಲವು ತೋರಿದ್ದರು ಹೀಗಾಗಿ ಗ್ರಾಮೀಣ ಪ್ರದೇಶದ ಒಡೆದ ಗೋಡೆಗಳು, ನೆಲದ ಮೇಲೆ ಬಿದ್ದ ನೀರು, ಆಕಾಶದಲ್ಲಿಯ ಮೋಡಗಳು ಇವರಿಗೆ ಕಲಾಕೃತಿಗಳಂತೆ ಕಾಣುತ್ತಿದ್ದವು. ಮನೆಯಲ್ಲಿ ಸಗಣಿಯಿಂದ ಸಾರಿಸಿ ಕೆಮ್ಮಣ್ಣಿನಿಂದ ಹಾಕಿದ ಪಟ್ಟಿ, ಮನೆಯ ನೆಲವನ್ನು ಸಾರಿಸಿ ಸಿಂಗರಿಸಿರುವ ಸಂದರ್ಭವನ್ನು ನೋಡಿದಾಗ ಬಾಲಕ ಮುರುಗಯ್ಯನವರಿಗೆ ಹಬ್ಬದ ಮುನ್ಸೂಚನೆ ಸಿಗುತ್ತಿತ್ತು. ಎತ್ತುಗಳಿಗೆ ಕಾರಹುಣ್ಣಿಮೆಯಲ್ಲಿ ಸಿಂಗರಿಸುವುದನ್ನು ಕಂಡು ಅಲ್ಲಿರುವ ಬಣ್ಣಗಳು, ಆಕೃತಿಗಳು, ಸೌಂದರ್ಯ ಮುರುಗಯ್ಯನವರ ಮೇಲೆ ಗಾಡವಾದ ಪರಿಣಾಮ ಬೀರಿದವು.

ಮುರುಗಯ್ಯನವರು ಒಂದನೇ ತರಗತಿ ಅಭ್ಯಾಸ ಮಾಡುತ್ತಿರುವ ಸಂದರ್ಭದಲ್ಲಿ ಚಿತ್ರ ತೆಗೆಯುವುದನ್ನು ಅಲ್ಲಿಯ ಗುರುಗಳು ಹೇಳಿಕೊಡುತ್ತಿದ್ದರು. ಔಡಲ ಎಲೆ, ಆಲದ ಎಲೆ, ಅರಳಿ ಎಲೆ ಹೀಗೆ ಇರುತ್ತವೆ. ಮತ್ತು ಚಿತ್ರವನ್ನು ಹೇಗೆ ಬಿಡಿಸಬೇಕೆಂದು ಹೇಳಿಕೊಟ್ಟು ಅವುಗಳ ಹೆಸರನ್ನು ಬರೆಯಿಸುತ್ತಿದ್ದರು. ಹೀಗಾಗಿ ಬರಹಕ್ಕಿಂತಲೂ ಮುರುಗಯ್ಯನವರು ಚಿತ್ರಕಲೆಗೆ ಮಹತ್ವ ನೀಡುತ್ತಿದ್ದರು. ಮಲ್ಲಾರೇಪ್ಪ. ತೋರಾತ ಅವರ ಮನೆಯಲ್ಲಿ ಗಣಪತಿಗೆ ಸೊಂಡಿ ಮಾಡೋದು,

ಕಿರೀಟಕ್ಕೆ ಕುಸುರು ಕೊಡಸೋದು, ಬಣ್ಣ ಹಚ್ಚುವುದನ್ನು ನೋಡುತ್ತಾ ನಿಂತು ಅವುಗಳನ್ನು ಸೂಕ್ಷ್ಮವಾಗಿ ಗಮನಿಸಿ, ಮನೆಗೆ ಹೋದ ನಂತರ ರೇಖೆಗಳ ಮುಖಾಂತರ ಚಿತ್ರಿಸಲು ಪ್ರಯತ್ನ ಪಡುತ್ತಿದ್ದರು.

ಮುರುಗಯ್ಯನವರ ಹೆಸರು ಶಾಲಾ ದಾಕಲಾತಿಯಲ್ಲಿ ಎಂ. ಜಿ. ವಾಚೇದಮಠ ಆಗಿ ಪರಿವರ್ತನೆಗೊಂಡಿತು. ವಿದ್ಯಾಭ್ಯಾಸಕ್ಕೆ ಇವರ ತಂದೆಯವರು ಹೆಚ್ಚಿನ ಪ್ರೋತ್ಸಾಹ ನೀಡಲಿಲ್ಲ. ಆದರೆ ಮಗನ ಭಾವನೆಗಳನ್ನು ಮತ್ತು ಸೂಕ್ಷ್ಮ ಆಲೋಚನೆಗಳನ್ನು ಗ್ರಹಿಸುತ್ತಿದ್ದ ಇವರ ತಾಯಿ ವಿದ್ಯಾಭ್ಯಾಸದ ಕಡೆಗೆ ಸಾಗಲು ಪ್ರೇರಣೆ ನೀಡಿದರು. ಬಿಜ್ಜೂರಿನ ಸಾಲಿ ಗುಡಿಯಲ್ಲಿ ಬಿನ್ನೆತ್ತಾ, ದೊಡ್ಡ ಬಿನ್ನೆತ್ತಾ, ಒಂದನೆಯ ತರಗತಿ, ಎರಡನೆಯ ತರಗತಿ ನಂತರದಲ್ಲಿ ಐದನೆಯ ಮತ್ತು ಆರನೆಯ ತರಗತಿಯನ್ನು ತವರೂರಾದ ಕೊಗನೂರಿನಲ್ಲಿ ಅಭ್ಯಾಸ ಮಾಡಿದರು.

ವಾಚೇದಮಠರು 1949-50 ರಲ್ಲಿ ಮೋಟೆ ಬೆನ್ನೂರಿನಲ್ಲಿ ತಮ್ಮ ಸಂಪ್ರದಾಯದಂತೆ ಕಂತಿಭಿಕ್ಷೆ ಮಾಡಿ ಮುಲ್ಕಿಪರೀಕ್ಷೆ (ಏಳನೆ ತರಗತಿ) ತೇರ್ಗಡೆ ಹೊಂದಿದರು. ಮುಂದೆ 1950 ರಲ್ಲಿ ಎಂಟನೆಯ ತರಗತಿಯನ್ನು ಲಕ್ಷ್ಮೇಶ್ವರದ ಉಮಾ ಹೈಸ್ಕೂಲಿನಲ್ಲಿ ಅಭ್ಯಾಸ ಮಾಡಿದ್ದರು. ಅಲ್ಲಿ ಚಿತ್ರಕಲಾ ಶಿಕ್ಷಕರಾದ ಶ್ರೀ ಎಸ್. ಜಿ. ಗೋಳಣ್ಣವರ ಮಾರ್ಗದರ್ಶನದಲ್ಲಿ ಚಿತ್ರಕಲೆಗೆ ಹೆಚ್ಚು ಆಸಕ್ತಿ ತೋರಿಸಿದರು.

ಎಸ್. ಜಿ. ಗೋಳಣ್ಣವರ ಮಾರ್ಗದರ್ಶನದಲ್ಲಿ 1951 ರಲ್ಲಿ ಗದಗ ಮುನ್ಸಿಪಲ್ ಹೈಸ್ಕೂಲಿನಲ್ಲಿ ಇಂಟರ ಮಿಡಿಯಟ್ ಗ್ರೇಡ್ ಪರೀಕ್ಷೆಯನ್ನು ತೇರ್ಗಡೆ ಹೊಂದಿದರು. ವಾಚೇದಮಠ ಅವರು ರಚಿಸುತ್ತಿದ್ದ ಸ್ಪಷ್ಟವಾದ ರೇಖೆ, ವರ್ಣ ವಿನ್ಯಾಸವನ್ನು ಇವರ ಸ್ನೇಹಿತರು ಗಮನಿಸಿ ಇವರಿಗೆ ಡ್ರಾಯಿಂಗವಾಲಾ ಎಂದು ಕರೆಯುತ್ತಿದ್ದರು. ಶಿರಹಟ್ಟಿಯಲ್ಲಿ ಎಂಟನೆಯ ತರಗತಿ ಅಭ್ಯಾಸ ಮಾಡುತ್ತಿರುವ ಸಂದರ್ಭದಲ್ಲಿ ಒಂದು ದಿನ ಯಾರ ಸಹಾಯವನ್ನು ಬಯಸದೆ ಗದುಗಿಗೆ ಬಂದರು ಗದುನಿನಲ್ಲಿ ಉಳಿಯುವುದಕ್ಕೆ ಚಿತ್ರಕಲಾ ಅಭ್ಯಾಸ ಪ್ರಾರಂಭಿಸುವುದಕ್ಕೆ ಯಾವುದೇ ಅನುಕೂಲತೆಯ ಬಗ್ಗೆ ವಿಚಾರಿಸದೇ ಶ್ರೀ ಜಗದ್ಗುರು ತೋಂಟದಾರ್ಯ ಮಠದ ಎದುರಿಗೆ ಇರುವ ಬೇವಿನ ಕಟ್ಟೆಯ ಹತ್ತಿರ ವಾಚೇದಮಠ ಅವರು ನಿಂತಾಗ ದಿಡೀರನೆ ಚಿತ್ರಕಲಾವಿದ ಟಿ. ಪಿ. ಅಕ್ಕಿ ಅವರು ಎದುರಿಗೆ ಬಂದರು. ಆದರೆ ಶಿಕ್ಷಕರನ್ನು ನೇರವಾಗಿ ಹೇಗೆ ಮಾತನಾಡಿಸುವುದು ? ಎಂದು ಭಯ ನಂತರ ಭಯದಿಂದ ಮುಕ್ತರಾಗಿ ಡ್ರಾಯಿಂಗ ಗ್ರೇಡ್ ಪರೀಕ್ಷೆ ಪಾಸಾಗಿದ್ದೇನಲ್ಲ ಎಂಬ

ಧೈರ್ಯದಿಂದ ಕಲಾ ಶಿಕ್ಷಕ ಶ್ರೀ ಟಿ. ಪಿ. ಅಕ್ಕಿ ಅವರನ್ನು ಮಾತನಾಡಿಸಿ ತಮ್ಮ ಕಲಾ ಗುರುಗಳನ್ನಾಗಿ ಮಾಡಿಕೊಳ್ಳುವ ಮನದಾಸೆಯನ್ನು ಅವರ ಮುಂದೆ ವ್ಯಕ್ತಪಡಿಸಿದರು. ಅದಲ್ಲದೆ ಚಿತ್ರಕಲಾ ಶಿಕ್ಷಣವನ್ನು ಮುಂದುವರೆಸಲು ಗದುಗಿಗೆ ಬಂದಿರುವುದನ್ನು ತಿಳಿಸಿದರು.

ಶ್ರೀ ಟಿ. ಪಿ. ಅಕ್ಕಿಯವರು ಮರುದಿನ ಕಲಾಮಂದಿರಕ್ಕೆ ಬರಲು ಹೇಳಿದರು. ನಂತರ ಇಲ್ಲೆ ವಾಸ್ತವ್ಯ ಮಾಡಿ ಚಿತ್ರಕಲಾ ಶಿಕ್ಷಣವನ್ನು ಮುಂದುವರಿಸಬೇಕು ಎಂದು ಪ್ರೋತ್ಸಾಹ ನೀಡಿದರು ಎಂದು ಇಂದಿಗೂ ವಾಚೇದಮಠ ಅವರು ನೆನೆಯುತ್ತಾರೆ. ಮುಂದೆ ವಿಜಯ ಕಲಾಮಂದಿರದಲ್ಲಿಯೇ ಇದ್ದು ಒಂಭತ್ತು ಮತ್ತು ಹತ್ತನೆಯ ತರಗತಿಯನ್ನು ಮುನ್ಸಿಪಲ್ ಹೈಸ್ಕೂಲಿನಲ್ಲಿ ಅಭ್ಯಾಸ ಮಾಡುತ್ತ ಬೆಳಗಿನ ವೇಳೆಗೆ ಮತ್ತು ಸಂಜೆಯ ವೇಳೆಗೆ ಕಲಾಮಂದಿರದಲ್ಲಿ ಚಿತ್ರಕಲಾ ಅಭ್ಯಾಸದಲ್ಲಿ ತೊಡಗುತ್ತಿದ್ದರು. ಕಲಾಮಂದಿರದಲ್ಲಿ ಶ್ರೀ ವಿ. ಟಿ. ಕಾಳೆ, ಶ್ರೀ ಎ. ಎಂ. ಕಮಾನಗಾರರು, ಶ್ರೀ ಎಸ್. ಜಿ. ಗೋಳಣ್ಣವರ, ಶ್ರೀ ಸಿ. ಟಿ. ರಾಯಕರ ಇವರು ವಾಚೇದಮಠ ಅವರಿಗೆ ಗುರುಗಳಾಗಿ ಮಾರ್ಗದರ್ಶನ ನೀಡಿದರು.

1952 ರಲ್ಲಿ ಎಲಿಮೆಂಟರಿ, ಡ್ರಾಯಿಂಗ್ ಆ್ಯಂಡ್ ಪೇಂಟಿಂಗ್ ಪಾಸಾದರು. 1953 ರಲ್ಲಿ ಕಾರಣಾಂತರಗಳಿಂದ ಚಿತ್ರಕಲಾ ಅಭ್ಯಾಸವನ್ನು ಸ್ಥಗೀತಗೊಳಿಸಿದರು. 1954 ರಲ್ಲಿ ಶ್ರೀ ಟಿ. ಪಿ. ಅಕ್ಕಿಯವರು ವಾಚೇದಮಠ ಅವರನ್ನು ಕರೆತರಲು ಇಬ್ಬರು ಶಿಷ್ಯರನ್ನು ಕಳುಹಿಸಿ ಗದುಗಿಗೆ ಮತ್ತೆ ಕರೆಯಿಸಿಕೊಂಡರು. ಮುಂದಿನ ಚಿತ್ರಕಲಾ ಪರೀಕ್ಷೆಗಳನ್ನು ಕಟ್ಟಲು ಸಹಕಾರ, ಪ್ರೋತ್ಸಾಹ ನೀಡಿ ಅವರ ಚಿತ್ರಕಲಾ ಅಭ್ಯಾಸವನ್ನು ಮುಂದುವರೆಯುವಂತೆ ಮಾಡಿದರು. ವಾಚೇದಮಠ ಅವರು ಗದುಗಿನ ಕಲಾಮಂದಿರದಲ್ಲಿ ಅಭ್ಯಾಸ ಮಾಡುವಾಗ ಎಲಿಮೆಂಟರಿ ವಿಭಾಗದಲ್ಲಿ ಶ್ರೀ ಎನ್.ಎಸ್.ಶಿಲ್ಪಿ, ಶ್ರೀ ಆರ್.ಎಫ್.ಮಿಸ್ಕಿನ್, ಶ್ರೀ ಸಿ.ವಾಯ್.ಕಾಮಾಜಿ,ಬಿ.ಎ. ತೆಗ್ಗಿನಮನಿ, ಶ್ರೀ ಎಲ್.ಜಿ ಹಂದಿಗೋಳ, ಶ್ರೀ ಎಂ.ಎ. ಚಟ್ಟಿ, ಶ್ರೀ ಸಿ. ಎನ್. ಪಾಟೀಲ, ಶ್ರಿ ಟಿ.ಪಿ. ಅಕ್ಕಿಯವರು ವಾಚೇದಮಠ ಅವರಿಗೆ ಗುರುಗಳಾಗಿ ಚಿತ್ರಕಲಾ ಅಭ್ಯಾಸಕ್ಕೆ ಉತ್ತಮ ಅಡಿಪಾಯ ಕಲ್ಪಿಸಿದರು.

ಕಲಾಮಂದಿರದಲ್ಲಿ ಅಭ್ಯಾಸ ಮಾಡುವಾಗಲೇ ಅಲ್ಲಿ ಆರಂಭವಾದ ವಿಜಯ ನಾಟ್ಯ ಸಂಘ, ಸಂಘಟನೆಯ ಸದಸ್ಯರಾಗಿ ನಾಟಕದ ಗೀಳನ್ನು ಬೆಳೆಸಿಕೊಂಡು ವಿಜಯನಗರ ಸಾಮ್ರಾಜ್ಯ ನಾಟಕದಲ್ಲಿ ಅಭಿನಯಿಸಿ ತಮ್ಮಲಿದ್ದ ರಂಗಪ್ರತಿಭೆಯನ್ನು ಹೊರ ಹಾಕಿದರು. ಹೀಗೆ ಕಲಾಮಂದಿರದ ಎಲ್ಲ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿ ಇದ್ದ ವಿದ್ಯಾರ್ಥಿ ಎಂ. ಜಿ. ವಾಚೇದಮಠರು.

1955 ರಲ್ಲಿ ಚಿತ್ರಕಲಾ ಶಿಕ್ಷಕ ತರಬೇತಿ ಪಡೆಯಬೇಕೆಂದು ಧಾರವಾಡದ ಶ್ರೀ ಡಿ. ವ್ಹಿ. ಹಾಲಭಾವಿಯವರು ಸ್ಥಾಪಿಸಿದ ಪ್ರತಿಸ್ಟಿತ ಸ್ಕೂಲ ಆಫ್ ಆರ್ಟನಲ್ಲಿ ಪ್ರವೇಶ ಪಡೆದು ಒಂದು ವರ್ಷದ ಡಿ.ಟಿ.ಸಿ. ಮತ್ತು ಇಂಟರಿಮೆಡಿಯಟ್ ಡ್ರಾಯಿಂಗ್ ಆ್ಯಂಡ್ ಪೇಂಟಿಂಗ್ ಕೋರ್ಸನಲ್ಲಿ ದ್ವಿತೀಯ ರ್‍ಯಾಂಕ ಪಡೆದರು. ನಂತರ 1956 ರಲ್ಲಿ ಶಿರಹಟ್ಟಿಯ ಡಬಾಲಿ ಹೈಸ್ಕೂಲಿನಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಂಡರು. ಈ ಸಂದರ್ಭದಲ್ಲಿ ಶನಿವಾರ ಮತ್ತು ರವಿವಾರ ಗದುಗಿನ ಕಲಾಮಂದಿರಕ್ಕೆ ತೆರಳಿ ಚಿತ್ರಕಲಾಭ್ಯಾಸ ಮಾಡುತ್ತಿದ್ದರು.

1957 ರಲ್ಲಿ ಮುಂಬೈನಲ್ಲಿ ಹೆಚ್ಚಿನ ವ್ಯಾಸಂಗ ಮಾಡುವ ಅವಕಾಶವನ್ನು ಕಲ್ಪಿಸಿಕೊಂಡು 1957 ರಲ್ಲಿ ಚಿತ್ರಕಲಾ ಶಿಕ್ಷಕರ ವೃತ್ತಿಗೆ ರಾಜೀನಾಮೆ ನೀಡಿ ಉನ್ನತ ವ್ಯಾಸಂಗಕ್ಕೆ ಮುಂಬೈಗೆ ಪ್ರಯಾಣ ಬೆಳೆಸಿದರು. 1958 ರಲ್ಲಿ ಮುಂಬೈಯಲ್ಲಿ ಜಿ. ಎಸ್. ದಂಡಾವತಿಮಠ ಅವರು ಸ್ಥಾಪಿಸಿದ ನೂತನ ಕಲಾಮಂದಿರದಲ್ಲಿ ಪ್ರವೇಶ ಪಡೆದರು. ನಗ್ನ ಚಿತ್ರಗಳ (ಅನಾಟೋಮಿ) ಅಭ್ಯಾಸ ಮಾಡಲು ಕರ್ನಾಟಕದಲ್ಲಿ ಅವಕಾಶ ಇರದಿದ್ದನ್ನು ಅರಿತಿದ್ದ ಇವರು ಇಂತಹ ಸಂದರ್ಭದಲ್ಲಿ ಇಲ್ಲಿ ಅವರಿಗೆ ನಗ್ನ ಚಿತ್ರಗಳನ್ನು ಅಭ್ಯಾಸ ಮಾಡುವ ಅವಕಾಶ ದೊರೆಯಿತು. ಜಿ. ಎಸ್. ದಂಡಾವತಿಮಠ ಅವರ ಮಾರ್ಗದರ್ಶನದಲ್ಲಿ ಡಿಪ್ಲೋಮಾ, ಆರ್ಟ ಮಾಸ್ಟರ ಪರೀಕ್ಷೆಯಲ್ಲಿ ವಾಚೇದಮಠ ಅವರು ದ್ವಿತೀಯ ಸ್ಥಾನದಲ್ಲಿ ತೇರ್ಗಡೆ ಹೊಂದಿ ಇದರ ಜೊತೆಗೆ ಆರ್ಟ ಆ್ಯಂಡ ಕ್ರಾಪ್ಟ ಇನ್ ಬುಕ್ ಬೈಂಡಿಂಗ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾದರು.

ಮುಂಬೈಯಲ್ಲಿ ವಾಚೇದಮಠ ಅವರಿಗೆ ಖ್ಯಾತ ಚಿತ್ರಕಲಾವಿದ ಎಸ್. ಎಂ. ಪಂಡಿತ ಅಚರೇಕರ, ಕೆ. ಕೆ. ಹೆಬ್ಬಾರ, ಎಂ. ಎಫ್. ಹುಸೇನ ಹೀಗೆ ಅನೇಕ ಕಲಾವಿದರ ಸಂಪರ್ಕ ಮತ್ತು ಪರಿಚಯವಾಯಿತು. ಅದಲ್ಲದೆ ಎ. ಎ. ಅಲಮೇಲರ ಅವರ ಮನೆಯಲ್ಲಿ ಆರು ತಿಂಗಳವರೆಗೆ ಇದ್ದು ಜೊತೆಗೆ ಕೆಲಸ ಮಾಡಿದ್ದಾರೆ.

ನೂತನ ಕಲಾ ಮಂದಿರದಲ್ಲಿ ಕೆ. ಕೆ. ಹೆಬ್ಬಾರ, ಶ್ರೀ ಧೋಪೇಶ್ವರಕರ, ಶ್ರೀ ಭೋಸಲೆ, ಶ್ರೀ ಶುಕ್ಲಾ ಮತ್ತು ಡಬ್ಲು ಲಾಂಗಹ್ಯಾಮರ, ಅವರುಗಳು ರಚಿಸಿದ ಭಾವಚಿತ್ರ ಪ್ರಾತ್ಯಕ್ಷಿಕೆಗಳನ್ನು ಕಂಡು ಅವರುಗಳು ಹಾಕಿದ ರೇಖೆ, ವರ್ಣ ವಿನ್ಯಾಸ ಹೀಗೆ ನಾನು ಕೂಡಾ ಯಥಾವತ್ತಾಗಿ ಕಲಾಕೃತಿ ಮೂಡಿಸಬೇಕೆಂಬ ಹಂಬಲ ಅವರಲ್ಲಿ ಹಾತೋರೆಯುತ್ತಿತ್ತು.

ವಾಚೇದಮಠ ಅವರು ನೂತನ ಕಲಾಮಂದಿರದಲ್ಲಿದ್ದಾಗಲೆ ಇವರು ಹಾಕಿದ ರೇಖೆ, ಬಿಂದು, ಶೂನ್ಯದ ಸಂಕೇತ ಆದರೆ ಬಿಂದು ರೇಖೆಯಾಗಿ ಸಾಗುವಾಗ ಅದು ಅನಂತತೆಗೂ ಸಂಕೇತವಾಗುತ್ತದೆ. ರೇಖೆಯ ಗತಿ ಕಲಾವಿದನ ಸೃಜನಶೀಲತೆಯನ್ನು ಸರಿಸುವ ಅದರಲ್ಲಿ ವ್ಯಕ್ತವಾಗುವ ಭಾವ ಸಂಚಾರವೂ ಅನಂತವೆನಿಸುವುದಿದೆ. ಹೃದಯ ಸಂವಾದಿಯಾಗುವ ಅಂತಹ ರೇಖೆ ವೀಕ್ಷಕನ ಹೃದಯ ತಟ್ಟುತ್ತದೆ, ಎಚ್ಚರಿಸುತ್ತದೆ. ವಿಚಿತ್ರ ಆನಂದಾನುಭೂತಿಗೆ ಕಾರಣವಾಗುತ್ತದೆ.

ಕಲಾವಿದ ವಾಚೇದಮಠ ಅವರ ರೇಖೆಗಳನ್ನು ಮೆಚ್ಚದವರಿಲ್ಲ ಅವುಗಳ ವಿನ್ಯಾಸದಲ್ಲಿ ನೃತ್ಯದ ಗತಿ, ಲಯ, ಆನಂದ, ಅನುಕಂಪ, ವಿಸ್ಮಯಗಳ ಭಾವಸಂಚಾರ ಜೀವನೋಲ್ಲಾಸದ ಉನ್ಮಾದ, ಭಯ, ಕಾತರ, ನೊವು, ಅಸೂಯೆ, ಮುಗ್ಧತೆ ಇಂಥವೆಲ್ಲ ಭಾವನೆಗಳ ಪರಿಣಾಮಕಾರಿ ರೇಖೆಗಳನ್ನು ವಿದ್ಯಾಭ್ಯಾಸದ ಸಮಯದ ಹಾಕುತ್ತಿದ್ದರು. ಇವರು ಹಾಕುವ ರೇಖೆಗಳಿಗೆ ಇವರ ಸಹಪಾಠಿಗಳು ಅಪಾರ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ಅಲ್ಲದೆ ಸ್ವತಃ ದಂಡಾವತಿಮಠ ಅವರೆ ಇವರ ರೇಖೆಯ ಪ್ರಭಾವಕ್ಕೆ ಒಳಗಾಗಿದ್ದರು. ವಾಚೇದ ಮಠ ಅವರು ಮುಂಬೈಯಲ್ಲಿ ಕಲಾಪ್ರದರ್ಶನದಲ್ಲಿ ಭಾಗವಹಿಸಿದಾಗ ಅವರ ರೇಖಾ ಚಿತ್ರಗಳು 'ನವನೀತ' ಮಾಸಪತ್ರಿಕೆಯಲ್ಲಿ ಪ್ರಕಟಗೊಂಡಿದ್ದವು.

1958 ರಲ್ಲಿ ತೈಲವರ್ಣ ಲೇಪಿಸಿ ಚಿತ್ರಿಸಿದ "ಸ್ಟೀಲ್ ಲೈಫ್" ಮುಂಬೈನ ಮಿಲಟರಿ ಕ್ಯಾಂಪದಲ್ಲಿ ದ್ವಿತೀಯ ಸ್ಟುಡೆಂಟ ರ್‍ಯಾಲಿ ಸ್ಥಾನವನ್ನು ಪಡೆಯಿತು. ಸ್ಟುಡೆಂಟ ರ್‍ಯಾಲಿ ಡಿಪ್ಲೋಮಾ ತೇರ್ಗಡೆ ಹೊಂದಿ ಸ್ಟುಡೆಂಟ ಅಸೋಸಿಯೇಶನ್ ಹಾಗೂ ಅನೇಕ ಸಮೂಹ ಕಲಾಪ್ರದರ್ಶನಗಳಲ್ಲಿ ವಾಚೇದಮಠ ಅವರು ಕಲಾಕೃತಿಗಳನ್ನು ಪ್ರದರ್ಶಿಸಿದರು. ಹೀಗೆ ದಿನ ದಿನಕ್ಕೆ ಮುಂಬೈ ಕಲಾ ಪರಿಸರದಲ್ಲಿ ಇವರ ಹೆಸರು ಮತ್ತು ಕಲಾಕೃತಿಗಳು ಜನಮನ್ನಣೆ ಪಡೆದವು.

ಇವರ ಸಹಪಾಠಿಗಳಾದ ಶ್ರೀ ಪದ್ಮಸಾಲಿ, ಶ್ರೀ ಮುನಸೀರಾಮ, ಶ್ರೀ ಕೆ. ಪಿ. ರಾಘಪ್ಪನವರ, ಶ್ರೀ ಹೆಗಡೆ ಮುಂತಾದವರು ವಾಚೇದಮಠ ಅವರಿಗೆ ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೆಂದು ವಾಚೇದಮಠ ಅವರು ಸ್ಮರಿಸಿಕೊಳ್ಳುತ್ತಾರೆ. ಈ ಕಲಾಶಾಲೆಯಿಂದ ಅನೇಕ ಕಲಾವಿದರು ಹೊರಬಂದು ಬೇರೆ ಬೇರೆ ಸ್ಥಳಗಳಲ್ಲಿ ನೆಲೆಯೂರಿದರು. ಆದರೆ ವಾಚೇದಮಠ ಅವರು ಡಿಪ್ಲೋಮಾದಲ್ಲಿ ದ್ವಿತೀಯ ಸ್ಥಾನಗಳಿಸಿ ನೂತನ ಕಲಾಮಂದಿರದಲ್ಲೇ ಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಲು ದಂಡಾವತಿಮಠ ಅವರು ಅವಕಾಶ ನೀಡಿದರು.

ತಾವು ವಿದ್ಯಾಭ್ಯಾಸ ಮಾಡಿದ ಕಲಾಮಂದಿರದಲ್ಲಿಯ ಕಲಾ ಶಿಕ್ಷಕನಾಗಿ ಸೇವೆ ಸಲ್ಲಿಸುವುದೆಂದರೆ ಎಂತಹ ಸಂತೋಷ ವಾಚೇದಮಠ ಅವರಿಗೆ ಆಗಿರಬೇಕು. ಈದೊಂದು ಅವಕಾಶ ಸದುಪಯೋಗ ಮಾಡಿಕೊಂಡು ತಮ್ಮಲ್ಲಿ ಇರುವಂತಹ ವಿಧ್ಯೆಯನ್ನು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು. ಆದರೆ ಇವರ ಕಲಾ ಸೇವೆ ಬಹುದಿನಗಳವರೆಗೆ ಸಾಗಲಿಲ್ಲ ಕಾರಣ ಮುಂಬೈಯಲ್ಲಿ ಆತ್ಮೀಯ ಮಿತ್ರ ಕನ್ನಡಿಗರವರಾದ ಶ್ರೀ ಶೇಠ್ ಅವರಿಗೆ ಆಕಸ್ಮಿಕ ರೇಲ್ವೆ ಅಪಘಾತದಲ್ಲಿ ಎರಡು ಕಾಲುಗಳನ್ನು ಕಳೆದುಕೊಂಡು ಆಸ್ಪತ್ರೆಗೆ ಸೇರಿದ್ದರು. ಇವರನ್ನು ನೋಡಲು ವಾಚೇದಮಠ ಅವರು ಆಸ್ಪತ್ರೆಗೆ ಬೇಟಿ ನೀಡಿದಾಗ ಮಿತ್ರ ಅನುಭವಿಸಿದ ನೋವು, ಯಾತನೆಯನ್ನು ಕಂಡು, ನನಗೂ ಹೀಗೆಯಾದರೆ ಏನು ನನ್ನನ್ನು ನೋಡಿಕೊಳ್ಳುವವರು ಯಾರು ಬಂದು ಬಳಗಕ್ಕೆ ಗೊತ್ತಾಗದೆ ಹೋದರೆ ಹೇಗೆ ಎಂಬ ಭಯಾನಕ ವಿಚಾರ ಆಲೋಚನೆಗಳು ಇವರನ್ನು ಕಾಡತೊಡಗಿದವು. ಮುಂಬೈ ಜೀವನ ಅಲ್ಲಿಯ ವಾತಾವರಣ ವಾಚೇದಮಠರಿಗೆ ಭಯಾನಕವೆನಿಸಿತು. ಬದುಕಲು ಇಲ್ಲಿಯೇ ಏಕೆ ಉದ್ಯೋಗ ಮಾಡಬೇಕು. ನನ್ನಲ್ಲಿ ಇರುವಂತಹ ಕಲಾಪ್ರತಿಭೆಯನ್ನು ಬೆಳೆಸಿಕೊಳ್ಳಲು ನಾನು ಸ್ವತಂತ್ರನಾಗಿದ್ದೇನೆ ಎಂದು ಮನಗಂಡು ಮುಂಬೈಯಿಂದ ನವೆಂಬರ 22 1959 ರಲ್ಲಿ ತಾಯ್ನಾಡಿಗೆ ಮರಳಿದರು.

ನಂತರದಲ್ಲಿ ಬೈಹೊಂಗಲದ ಆಗಿನ ಕಂದಾಯ ಮಂತ್ರಿಗಳಾದ ಶ್ರೀ ಎಚ್. ವ್ಹಿ. ಕೌಜಲಗಿಯವರನ್ನು ಬೇಟಿಯಾಗಿ ತಮ್ಮ ಕಲಾಪ್ರತಿಭೆ ಕುರಿತು ಮನವರಿಕೆ ಮಾಡಿಕೊಟ್ಟರು. ಇವರ ಕಲಾಕೃತಿಗಳನ್ನು ಮತ್ತು ಇವರ ಪ್ರತಿಭೆಯನ್ನು ಪರಿಶೀಲಿಸಿದ ಬಳಿಕ ಸವದತ್ತಿಯ ಕೆ.ಎಲ್. ಇ. ಸೊಸೈಟಿಯ ಹೈಸ್ಕೂಲಿಗೆ ಚಿತ್ರಕಲಾ ಶಿಕ್ಷಕರನ್ನಾಗಿ ನೇಮಿಸಿದರು.

ಸವದತ್ತಿ ಶ್ರೀ ರೇಣುಕಾಂಬೆಯ ಪುಣ್ಯಕ್ಷೇತ್ರ ನನಗೆ ಈ ಕ್ಷೇತ್ರವಲ್ಲಿ ಉದ್ಯೋಗ ದೊರಕಿದ್ದು ಬಹಳ ಸಂತೋಷವೆಂದುಕೊಂಡರು. ಶಕ್ತಿ ದೇವತೆಯ ಸ್ಥಳವಾದ ಸವದತ್ತಿಗೆ ಹೋಗಿ ನೋಡಿದಾಗ ಹಾಳು ಮಣ್ಣಿನ ಮನೆಗಳು, ಅಂಗಡಿ ಮುಂದೆ. ಕಟ್ಟೆಯ ಮೇಲೆ ಕುಳಿತು ಕಾಲಹರಣ ಮಾಡುವ ಜನರ ಗುಂಪುಗಳು. ಉದಾಹರಣೆಗೆ ಒಂದು ಕೊಡ ನೀರನ್ನು ಪಡೆಯಬೇಕೆಂದರೆ ಹಣವನ್ನು ಕೊಡಬೇಕು. ಇಂತಹ ಅಸ್ಥವ್ಯಸ್ಥತೆಯ ಮಧ್ಯ ಬದುಕಬೇಕಲ್ಲ ಎಂಬ ಭಯ ತಾತ್ಕಾಲಿಕವಾಗಿ ಕಾಡಿತು. ನಂತರ ವಾಸ್ತವ್ಯ ಹೂಡಿದ ಮೇಲೆ ಜನರ ಮಧ್ಯ ಬೆರೆತಾಗ ಅಲ್ಲಿಯ ಜನರ ವಿಶಾಲ ಮನೋಭಾವ ಆದರಾತಿಥ್ಯಗಳು ಗುರುಗಳನ್ನು

ಕಂಡರೆ ಅವರುಗಳು ನೀಡುವ ಗೌರವ ತಿಳಿದು ಸವದತ್ತಿಯಲ್ಲಿ ನೆಲೆನಿಂತರು. ಆಗ ಅವರಿಗೆ ಸಂಬಳ ರೂಪದಲ್ಲಿ ಒಂದು ನೂರಾ ಒಂದು ರೂಪಾಯಿಗಳನ್ನು ನೀಡುತ್ತಿದ್ದರು. ಸೇವೆ ಸಲ್ಲಿಸಿದ ಒಂಭತ್ತು ತಿಂಗಳು ಅವರಿವರ ಮನೆಯಲ್ಲಿ ಊಟ ಮಾಡಿಕೊಂಡಿದ್ದರು. ಅದಲ್ಲದೆ ಅವರ ಮುಖ್ಯ ಗುರುಗಳಾದ ಶ್ರೀ ವಿ. ಎಸ್. ಮುಳಿಮಠ ಇವರಿಗೆ ಎಲ್ಲ ರೀತಿಯ ಸಹಕಾರವನ್ನು ಈ ಸಂದರ್ಭದಲ್ಲಿ ನೀಡಿದ್ದನ್ನು ಇಂದಿಗೂ ಸ್ಮರಿಸಿಕೊಳ್ಳುತ್ತಾರೆ ವಾಚೇದಮಠ ಅವರು.

ವಾಚೇದಮಠ ಅವರು ಚಿತ್ರಕಲಾ ಶಿಕ್ಷಕರಾಗಿ ರೂಪಗೊಂಡ ಸಂದರ್ಭ ಹಾಗೂ ಹಿನ್ನೆಲೆಯಲ್ಲಿ ಇರುವ ದೃಶ್ಯ ವಾಚ್ಯತೆಯ ಒಂದು ಜ್ಞಾನ ಪ್ರಕಾರದ ವಿವಿಧ ವೀಕ್ಷಣಾಕ್ರಮದ ಮೇಲೆಯೂ ಬೆಳಕು ಚೆಲ್ಲುವ ಒಂದು ಪ್ರಾಯೋಗಿಕ ಕ್ರಮವು ಪ್ರಾರಂಭವಾಯಿತು. ಸವದತ್ತಿ ಪ್ರದೇಶದಲ್ಲಿ ಎಲ್ಲಮ್ಮನ ದೇವಿ ಆರಾಧಕರು ಚೌಡಕಿ ಹಿಡಿದು ಎಲ್ಲಮ್ಮ ದೇವಿಯನ್ನು ತಲೆಯ ಮೇಲೆ ಹೊತ್ತುಕೊಂಡು ಕುಣಿಯುವ ದೃಶ್ಯ, ಸುತ್ತಲಿನ ಪರಿಸರ, ಗ್ರಾಮೀಣ ಸೊಗಡು, ಜಾನಪದ ಶೈಲಿಯ ಚಿತ್ರಗಳಿಗೆ ಇವರ ರೇಖೆಗೆ ತಮ್ಮ ಕುಂಚಕ್ಕೆ ಆಹಾರವಾದವು.

ವಾಚೇದಮಠ ಅವರಿಗೆ 1961 ರಲ್ಲಿ ಸವದತ್ತಿಯಿಂದ ಅಥಣಿಯಲ್ಲಿರುವ ಕೆ.ಎಲ್.ಇ ಸೊಸೈಟಿಯ ನ್ಯೂ ಹೈಸ್ಕೂಲಿಗೆ ವರ್ಗಾವಣೆಯಾಯಿತು. ಈ ಪ್ರದೇಶ ಖ್ಯಾತ ಕಲಾವಿದರಾದ ಶ್ರೀ ಎಂ. ಎ. ಚಟ್ಟಿಯವರ ಜನ್ಮಸ್ಥಳ ಮತ್ತು ವಾಚೇದಮಠ ಅವರಿಗೆ ವಿದ್ಯಾರ್ಜನೆ ಮಾಡಿದ ಗುರುಗಳ ಊರು ಈ ಪ್ರೌಢ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ, ಸಭೆ ಸಮಾರಂಭಗಳಲ್ಲಿ ಮಕ್ಕಳು ಚಿತ್ರಿಸಿದ ಕಲಾಕೃತಿಗಳನ್ನು ಪ್ರದರ್ಶಿಸಿ, ಊರಲ್ಲಿಯ ನಾಗರಿಕರ ಮೆಚ್ಚುಗೆಗಳಿಸಿದರು. ಇದೇ ಅವಧಿಯಲ್ಲಿ ಮೈಸೂರು ರಾಜ್ಯದ ಪಠ್ಯಪುಸ್ತಕಗಳಿಗೆ ಸಂಬಂಧಿಸಿದಂತೆ ಅನೇಕ ಚಿತ್ರಗಳನ್ನು ಮಾಡಿಕೊಟ್ಟರು.

ಸಂಸಾರ

ಬಾಲ್ಯದಲ್ಲಿ ಬಡತನದ ಅತ್ಯಂತ ಕಟು ಅನುಭವಗಳನ್ನು ಸಹಿಸಬೇಕಾಗಿ ಬಂದಿದ್ದರು. ವಾಚೇದಮಠ ಅವರಿಗೆ ದನ್ಯತೆಯ ಸಮಾದಾನವಿದೆ. ಮೇ 22, 1964 ರಲ್ಲಿ ಬಿಜ್ಜೂರಿನ ಆದರ್ಶ ಮನೆತನದ ಶ್ರೀ ಬಸವಯ್ಯನವರ ಹಿರಿಯ ಮಗಳಾದ ಸಾವಿತ್ರಿ ಅವರ ದಾಂಪತ್ಯ ಜೀವನದಲ್ಲಿ ಅವರ ಬಾಳಸಂಗಾತಿಯಾಗಿ ವಾಚೇದಮಠ ಅವರ ಬೇಕು ಬೇಡಗಳನ್ನು ಗಮನಿಸಿ ವಾಚೇದಮಠರ

ಕಲಾಸಾಧನೆಗೆ ನೆರಳಾಗಿ ನಿಂತು ತಮ್ಮ ಸಹಕಾರವನ್ನು ನೀಡುತ್ತಾ ಬಂದರು. ಅನೇಕ ವರ್ಷ ಕಳೆದರೂ ಇವರಿಗೆ ಮಕ್ಕಳ ಭಾಗ್ಯ ಕಾಣಲಿಲ್ಲ. ಮುಂದೆ 1984 ರಲ್ಲಿ ತಮ್ಮ 45ನೇ ವಯಸ್ಸಿನಲ್ಲಿ ಆಕಸ್ಮಿಕವಾಗಿ ಮರಣಹೊಂದಿದರು. ನಂತರ ಕುಟುಂಬದ ಮತ್ತು ಬಂಧು ಬಳಗದ ಒತ್ತಾಯಕ್ಕೆ ಮಣಿದು ವಾಚೇದಮಠರು 1985 ರಲ್ಲಿ ಹೊಸರಿತ್ತಿ ಹುಚ್ಚಯ್ಯನವರ ಮಗಳಾದ ಶಿವಗೀತಾಳನ್ನು ಮದುವೆಯಾದರು. ಇವರಿಗೆ ಇಬ್ಬರು ಪುತ್ರರು. (ಗುರುಪ್ರಕಾಶ ಮತ್ತು ಚನ್ನಬಸವ)

1965 ರಲ್ಲಿ ವಾಚೇದಮಠ ಅವರಿಗೆ ಮತ್ತೆ ಸವದತ್ತಿಗೆ ವರ್ಗವಾಗುತ್ತದೆ. ಈ ಮೊದಲೆ ಅಲ್ಲಿ ಕಾರ್ಯನಿರ್ವಹಿಸಿದ್ದರಿಂದ ವಾಚೇದಮಠ ಅವರಿಗೆ ಆ ಪರಿಸರ ತೊಂದರೆ ಎಂದು ಭಾವಿಸಲಿಲ್ಲ. ಮತ್ತೆ ವಿದ್ಯಾರ್ಥಿಗಳನ್ನು ಕಟ್ಟಿಕೊಂಡು ಚಿತ್ರಕಲೆಯ ಜೊತೆಗೆ ವಿದ್ಯಾರ್ಥಿಗಳಿಗೆ ನಾಟಕದ ಗೀಳನ್ನು ಬೆಳೆಸಿ, ಬಸವರೂಪ ದರ್ಶನ, ಗಾಂದಿ ದರ್ಶನ ಹೀಗೆ ಅನೇಕ ರಂಗ ತರಬೇತಿಗಳನ್ನು ವಿದ್ಯಾರ್ಥಿಗಳಿಂದ ಮಾಡಿಸಿ ಜನ ಮೆಚ್ಚುಗೆಯನ್ನು ಪಡೆದರು.

ಕಲಾ ಪ್ರದರ್ಶನಗಳು

1969 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವ ಸಂದರ್ಭದಲ್ಲಿ ಜಲವರ್ಣ ಮತ್ತು ರೇಖಾ ಚಿತ್ರಗಳನ್ನು ಪ್ರದರ್ಶಿಸಿದರು. ಅದಲ್ಲದೆ ರೇಖಾ ಚಿತ್ರಕ್ಕೆ ಪ್ರಶಸ್ತಿಯನ್ನು ಪಡೆದುಕೊಂಡರು. ನಂತರದಲ್ಲಿ ಗದುಗಿನ ವಿಜಯ ಕಲಾಮಂದಿರದಲ್ಲಿ ಶ್ರೀ ಟಿ. ಪಿ. ಅಕ್ಕಿ ಷಷ್ಟ್ಯಾಬ್ದಿ ಸಮಾರಂಭದಲ್ಲಿ ಅವರ ಶಿಷ್ಯ ಬಳಗ ಬೃಹತ್ ಕಲಾಪ್ರದರ್ಶನ ಏರ್ಪಡಿಸಿದ್ದರು. ಅದರಲ್ಲಿ ಇವರು ಒಬ್ಬರು 1976 ರಲ್ಲಿ “ಇಪ್ಪತ್ತು ಅಂಶಗಳ ಕಾರ್ಯಕ್ರಮ” ಎಂಬ ಶಿರ್ಷಿಕೆಯಡಿಯಲ್ಲಿ ಚಿತ್ರಕಲಾ ಪ್ರದರ್ಶನವೊಂದನ್ನು ಏರ್ಪಡಿಸಿ ಜನಮೆಚ್ಚುಗೆ ಪಡೆದರು.

1982 ರಲ್ಲಿ ಹುಬ್ಬಳ್ಳಿಯ ಎಂ.ವ್ಹಿ ಮಿಣಜಗಿ ಆರ್ಟ ಗ್ಯಾಲರಿಯಲ್ಲಿ ತಮ್ಮ ರೇಖಾ ಲಾಲಿತ್ಯವುಳ್ಳ ಅನೇಕ ಕಲಾಕೃತಿಗಳನ್ನು ಪ್ರದರ್ಶಿಸಿದರು. 1983 ರಲ್ಲಿ ಸವದತ್ತಿಯ ಗದಗ ರೋಟರಿ ಕ್ಲಬ್ ಮತ್ತು ಎಸ್.ಕೆ. ಸಂಯುಕ್ತ ಕಿರಿಯ ಮಹಾವಿದ್ಯಾಲಯದ ಆಶ್ರಯದಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದಶನ ನೀಡಿದ್ದಾರೆ. ಹೀಗೆ ಇವರ ಅನೇಕ ಚಿತ್ರಕಲಾ ಪ್ರದರ್ಶನಗಳಿಗೆ ಅನೇಕ ಮಹನೀಯರು ಬೇಟಿ ನೀಡಿ ಪ್ರಶಂಸಿಸಿದ್ದಾರೆ.

ವಾಚೇದಮಠ ಅರ ಕಲಾಕೃತಿಗಳ ಆಸ್ವಾದನೆಯಲ್ಲಿ ವೀಕ್ಷಕನ ಪಾತ್ರವು ವಿಶೇಷ ಅರ್ಥವನ್ನು ಪಡೆದುಕೊಳ್ಳುತ್ತದೆ. ಸಿನೆಮಾ ಮತ್ತು ನಾಟಕವನ್ನು ಹೊರತುಪಡಿಸಿದ ದೃಶ್ಯಕಲಾ ಪ್ರಕಾರದಲ್ಲಿ ವೀಕ್ಷಕನನ್ನು ಕಲಾವಿದ ತನ್ನ ಅಭಿವ್ಯಕ್ತಿಯ ಗಂಭೀರ ವಲಯದೊಳಗೆ ಬಿಟ್ಟುಕೊಳ್ಳುವುದೇ ಇಲ್ಲ ಎಂಬುದು ಒಂದು ಮುಖ್ಯ ಆರೋಪ. ವಾಚೇದಮಠ ಅವರ ಸುತ್ತಲಿನ ಕಲಾಸಂದರ್ಭದಲ್ಲಿ ಇಂತಹ ನಿರಾಕರಣೆಯು ಒಂದು ನಂಬಿಕೆ ಹಾಗೂ ಅಲಿಖಿತ ನಿಯಮದಿಂದ ಮೂಡಿಬಂದುದು ಆದ್ದರಿಂದಲೇ ವಾಚೇದಮಠ ಅವರ ಕೃತಿಗಳು ಜನಪರ (ದೇಶಿ) ಕಲೆ ಎಂದು ಹೇಳಬಹುದು.

ವಾಚೇದಮಠ ಅವರು ಮನೆಗೆ ಬಂದ ಭಿಕ್ಷುಕರನ್ನು ಕರೆದು ಅವರಿಗೆ ಹಣಕೊಟ್ಟು ಬಿಸಿಲಿನಲ್ಲಿ ನಿಲ್ಲಿಸಿ ಜಲವರ್ಣದಿಂದ ಅತ್ಯಲ್ಪ ವೇಳೆಯಲ್ಲಿ ಕಲಾಕೃತಿ ರಚಿಸುತ್ತಿದ್ದರು. ರವಿವಾರ ಸಂತೆ ಬಂತೆಂದರೆ ಕೈಯಲ್ಲಿ ನೋಟಬುಕ್ ಮತ್ತು ಪೆನ್ಸಿಲ್ ಹಿಡಿದುಕೊಂಡು ರೇಖಾಚಿತ್ರಗಳನ್ನು ಚಿತ್ರಿಸಲು ಹೊರಡುತ್ತಿದ್ದರು. ಸಂತೆಯಲ್ಲಿ ಲಂಬಾಣಿ ಜನರು, ರೈತರು, ಶಿಲ್ಪಿಗಳು, ಬೆಣ್ಣೆ ಮಾಡುವವರು, ಮತ್ತು ಖರೀದಿಸುವವರಿಗೆ ತಮ್ಮ ರೇಖೆಗಳಿಂದ ಜೀವ ತುಂಬುತ್ತಿದ್ದರು.

ಇವರ ದೃಷ್ಟಿಯ ವೇಗದ ತೀಕ್ಷ್ಣತೆಯಷ್ಟೆ ಕೈಯ ವೇಗದ ಚಲನೆಯೂ ಅಷ್ಟೆ ಪ್ರಮಾಣದಲ್ಲಿತ್ತು. ಸಂತೆಯಿಂದ ಸಂಜೆ ಮನೆಗೆ ಬಂದು ತಾವು ಹಾಕಿದ ರೇಖೆಗಳನ್ನು ಸಂಯೋಜನೆ ಮಾಡುತ್ತಿದ್ದರು. ವಾಚೇದಮಠರು ತಾವು ಕಲಾಕೃತಿ ಸೃಷ್ಠಿಸುವ ಕಾಲಕ್ಕೆ ಇತರರು ತಮ್ಮ ಜೊತೆಗೆ ಇರಲೇಬೇಕೆಂದು ಬಯಸಿದವರಲ್ಲ ಬೆಳಗಿನ ಜಾವ ನೂಟಬುಕ್ ಮತ್ತು ಪೆನ್ನ ಹಿಡಿದು ಸೃಷ್ಠಿಯ ಬೆಳಕಿನಲ್ಲಿ ಕೆಲ ನಿಮಿಷಗಳಲ್ಲಿಯೆ ಕೆಲವು ಕೃತಿಗಳನ್ನು ಚಿತ್ರಿಸಿದರೆ ತಿಂಗಳವರೆಗೆ ಚಿಂತಿಸಿ ಇವರು ರೂಢಿಸಿಕೊಳ್ಳುತ್ತಿದ್ದರು.

ಜನಸಾಮಾನ್ಯರಿಗೆ ಕಾಣಿಸಿದಂತಹ ಅನೇಕ ಸೂಕ್ಷ್ಮಾಂಶಗಳು ವಾಚೇದಮಠರಿಗೆ ಕಾಣಸಿಕ್ಕಿವೆ. ಅವುಗಳನ್ನು ತಮ್ಮಲ್ಲಿಯ ಸ್ಫೂರ್ತಿಯಿಂದ ಹಾಗೂ ಸಂವೇದನಾ ಶಕ್ತಿಯಿಂದ ಕಲಾಕೃತಿಗಳನ್ನು ಅರ್ಥ ಮಾಡಿಕೊಳ್ಳುವಂತೆ ಕಲಾಕೃತಿ ರಚಿಸಿದ್ದಾರೆ. ಕಲಾವಿದ ನೋಡುವ ವಸ್ತು ಒಂದೇ ಆಗಿದ್ದರೂ ಅವುಗಳಲ್ಲಿ ಅವರು ಗುರುತಿಸಿದ ಲಕ್ಷಣಗಳು ವಿಭಿನ್ನವಾಗಿವೆ. ಕಲಾ ಮಾಧ್ಯಮಗಳು ಬೇರೆಯಾಗಿವೆ. ಕಲಾತಂತ್ರ, ಪ್ರತ್ಯೇಕವಾಗಿರುವುದನ್ನು ಇವರ ಅನೇಕ ಚಿತ್ರಗಳಲ್ಲಿ ನಮಗೆ ಕಾಣಸಿಗುತ್ತವೆ.

ವಾಚೇದಮಠರ ಜೀವನಕ್ಕೂ ಕಲಾಕೃತಿಗೂ ನಿಕಟ ಸಂಬಂಧವಿದೆ. ತಮ್ಮಲ್ಲಿ ಹುಟ್ಟಿಕೊಂಡ ಅನಿಸಿಕೆಗಳ ಒತ್ತಡವನ್ನು ಭಾವನೆಗಳನ್ನು ಮಣ್ಣಿನಿಂದ ಮತ್ತು ಪ್ಲಾಸ್ಟರ ಆಫ್ ಪ್ಯಾರಿಸನಿಂದ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅದಲ್ಲದೆ ಪುರಾಣ ಪ್ರವಚನಗಳನ್ನು ಓದಿ ವಿಷಯಕ್ಕೆ ಸಂಬಂಧಿಸಿದಂತೆ ನೂರಾರು ವಸ್ತುವಿಷಯಗಳನ್ನು ರಚಿಸಿದ್ದಾರೆ. ಲಂಬಾಣಿ ಜನರು ಸುದ್ದಿಯನ್ನು ಓದುತ್ತಿದ್ದ ಮತ್ತು ಕೇಳುವರ ಗುಂಪು, ಎತ್ತಿಗೆ ನಾಲು ಕಟ್ಟಿಸುತ್ತಿರುವ ದೃಶ್ಯ, ಬಸ್ಸಿಗಾಗಿ ನೀರಿಕ್ಷೆ ಮಾಡುತ್ತಿರುವ ದೃಶ್ಯ, ಮೇವನ್ನು ನೀರಿಕ್ಷಿಸುತ್ತಿರುವ ದನಗಳ ಗುಂಪು, ದನಗಳು ವಿಶ್ರಾಂತಿ ತೆಗೆದುಕೊಳ್ಳುವ ದೃಶ್ಯ, ದನಗಾಹಿ ಮಕ್ಕಳು ವಿಚಾರಮಗ್ನವರಾಗಿರುವ ತಾಯಂದಿರು, ಮಕ್ಕಳನ್ನು ಪಾಲನೆ ಪೋಷಣೆ ಮಾಡುತ್ತಿರುವುದು ಹೀಗೆ ಅನೇಕ ಚಿತ್ರಗಳನ್ನು ತಮ್ಮ ಸರಳವಾದ ರೇಖೆಗಳಿಂದ ಸೇರೆ ಹಿಡಿದಿದ್ದಾರೆ. ಒಂದು ಸ್ಕೇಚ್ ಪುಸ್ತಕದ ಒಂದು ಹಾಳೆಯಲ್ಲಿ ಸುಮಾರು ಐವತ್ತರಿಂದ ಆರವತ್ತು ಚಿತ್ರಗಳನ್ನು ರೇಖಿಸಬಲ್ಲ ಸಾಮರ್ಥ್ಯವನ್ನು ನಾವು ಇವರ ಚಿತ್ರಗಳಿಂದ ಕಾಣಬಹುದು.

ವಾಚೇದಮಠರು ತಮ್ಮ ಕೃತಿ ರಚನೆಯ ಮೂಲಕ ತಮ್ಮಲ್ಲಿಯ ಭಾವನೆಗಳನ್ನು ಸಮರ್ಥವಾಗಿ ಸೇರೆ ಹಿಡಿದಿದ್ದಾರೆಯೆ ಹೇಗೆ ಎಂಬುದನ್ನು ಅವರ ಕಲಾಕೃತಿಗಳನ್ನು ಸ್ವತಃ ನೋಡಿ ನಿರ್ಣಯಿಸಬೇಕು. ಕೇವಲ ನೋಡಿದರೆ ಸಾಲದು ವೀಕ್ಷಿಸಿ ನಮ್ಮ ನಿತ್ಯ ಜೀವನದಲ್ಲಿ ನಮ್ಮ ಸುತ್ತಲಿನ ದೃಶ್ಯಗಳನ್ನು ಸೂಕ್ಷ್ಮವಾಗಿ ಗಮನಿಸಿ ಸಂವೇದನೆಗಳನ್ನು ಜಾಗೃತಗೊಳಿಸಿಕೊಂಡು ನಮ್ಮ ಅನೇಕ ಚಿಂತನೆಗಳನ್ನು, ಯೋಚನೆಗಳನ್ನು ತೊರೆದು ಕಲಾವಿದ ಎಂ. ಜಿ. ವಾಚೇದಮಠರ ಚಿತ್ರಗಳನ್ನು ನೋಡಿದರೆ, ಸ್ವಲ್ಪ ಸಮಯ ಕಳೆದರೆ ವಾಚೇದಮಠರ ಮಾನಸಿಕ ಸಂಬಂಧ ನಮಗೂ ಬರಬಹುದು.

ಚಿತ್ರ ಸುಷ್ಠಿ

ಕಲಾವಿದ ಎಂ. ಜಿ. ವಾಚೇದಮಠ ಚಿತ್ರಕಲೆ ಸ್ವಂತ ಆಧುನಿಕ ಮನೋ ಧರ್ಮವುಳ್ಳದ್ದು, ಅವರ ವರ್ಣ ಚಿತ್ರಗಳಿಗಿಂತ ಅವರ ರೇಖಾ ಚಿತ್ರಗಳನ್ನು ಗಮನಿಸಿದಾಗ ಭಾರತದ ಖ್ಯಾತ ಕಲಾವಿದ ಕೆ. ಕೆ. ಹೆಬ್ಬಾರರ ಸಾಲಿನಲ್ಲಿ ಮುಂಚೂಣಿಯಾಗಿ ನಿಲ್ಲುತ್ತಾರೆ ಎಂಬುದರಲ್ಲಿ ಸಂದೇಹವೇ ಇಲ್ಲ. ಅವರು ಹಾಕಿದ ರೇಖೆಗಳಲ್ಲಿಯ ಜೀವಂತಿಕೆ, ಚಲನೆ ಯಂತವರಸ್ವಾದರೂ

ನಿಬ್ಬೆರಗೊಳಿಸುತ್ತದೆ. ಅವರ ಕಲಾಕೃತಿಗಳಲ್ಲಿ ಶಾಂತತೆ, ಸಮಾದಾನ, ಎದ್ದು ತೋರುತ್ತವೆ. ಸದಾ ಪ್ರಯೋಗ ಶೀಲರಾದ ವಾಚೇದಮಠರ ಜೀವನದ ಪ್ರಾರಂಭದಿಂದ ಮಗುವಿನಂತೆ ಬಣ್ಣದ ಮೂಲಕ, ಸಂತೋಷ ಮತ್ತು ದುಖಃಗಳ ಅಭಿಯೊಕ್ತಿಯೊಂದಿಗೆ ಬಂದವರು. ಕಲಾ ಶಾಲೆಗಳಲ್ಲಿ ಹಾಗೂ ನಂತರದ ವಾಸ್ತವಿಕ ಶೈಲಿಯಲ್ಲಿ ಸಂಯೋಜನಾ ಚಿತ್ರಗಳು, ರೇಖಾ ಚಿತ್ರಗಳು, ಪ್ರಕೃತಿ ಚಿತ್ರಗಳು ಮತ್ತು ಪ್ಲಾಸ್ಟರ ಆಫ್ ಪ್ಯಾರಿಸ್ ಶಿಲ್ಪಗಳನ್ನು ರಚಿಸಿದ್ದಾರೆ. ಈಗಲೂ ತಮ್ಮ ಎಪ್ಪತ್ತಾರನೆಯ ವಯಸ್ಸಿನಲ್ಲಿ ಕಲಾಕೃತಿಗಳನ್ನು ರಚಿಸಿ ಜೀವನವನ್ನು ನಡೆಸುತ್ತಿದ್ದಾರೆ.

ರೇಖಾ ಚಿತ್ರಗಳು

ಎಂ. ಜಿ. ವಾಚೇದಮಠ ಅವರ ಅಸಂಖ್ಯ ರೇಖಾಚಿತ್ರಗಳನ್ನು ಗಮನಿಸಿದಾಗ ಚಿತ್ರಗಳ ಕುರಿತು ಒಂದಿಷ್ಟು ಹೆಚ್ಚಾಗಿಯೇ ವಿವರಿಸಬೇಕು ಅನಿಸುತ್ತದೆ. ಇವರ ವೇಗಭರಿತ ರೇಖಾ ಚಿತ್ರಗಳ ಕುರಿತು ಬರೆದರೆ ಪುಟಗಳಿಗೆ ಲೆಕ್ಕವೇ ಇರುವುದಿಲ್ಲ. ರೇಖಾ ಚಿತ್ರಗಳಲ್ಲಿನ ಲಯ, ಸರಳತೆ, ವೇಗ, ರೇಖೆಗಳನ್ನು ಒಂದು ಸ್ಪಷ್ಟವಾದ ಅಂದಾಜಿನಲ್ಲಿ ಗ್ರಹಿಸಿ ರೇಖೆಗಳನ್ನು ಹಾಕಲು ಸಾಮಾನ್ಯ ಪರಿಣಿತಿ ಖಂಡಿತವಾಗಿಯೂ ಸಾಧ್ಯವಿಲ್ಲ ರೇಖೆಗಳಲ್ಲಿ ಒಂದಕ್ಕೊಂದು ಲಯ ಪೂರ್ಣವಾಗಿ ಹೊಂದಿಕೊಂಡು ಸಮತೋಲನ ಕಂಡು ಬರುತ್ತಿದೆ. ಬಿಳಿಯ ಹಾಳೆಗಳಲ್ಲಿ ಕಪ್ಪು ಗೆರೆಗಳಿಂದ ಚಿತ್ರಿಸಿದ ಆ ಸರಳ ಚಿತ್ರಗಳು ಕೆಲವೊಮ್ಮೆ ಪೇಂಟಿಂಗ್‌ಗಳಿಗಿಂತ ಹೆಚ್ಚು ಕುಸಿಕೊಡಕೊಡಬಲ್ಲವು.

ಒಂದು ಕಾಗದ ಪಟ್ಟಿಯಲ್ಲಿ ಸುಮಾರು 40 ಪುರುಷ ಕಲಾಕೃತಿಗಳನ್ನು ಚಿತ್ರಿಸಿದ್ದಾರೆ. ಪ್ರತಿಯೊಬ್ಬರು ವಿವಿಧ ಭಂಗಿಗಳಲ್ಲಿ ತಮ್ಮ ತಮ್ಮ ಕೆಲಸಕಾರ್ಯಗಳಿಗೆ ಹೋಗುತ್ತಿರುವ ದೃಶ್ಯವಿದು. ಇದರಲ್ಲಿ ಯಥಾದರ್ಶನದ ಪರಿಕಲ್ಪನೆ, ಸ್ಥಳ ಹೊಂದಾಣಿಕೆ, ಆಕೃತಿಗಳ ಪ್ರಮಾಣಬದ್ಧತೆ. ಸ್ಪಷ್ಟವಾಗಿ ರೇಖೆಗಳಲ್ಲಿ ಮೂಡಿಬಂದಿದೆ. ರೇಖಾ ಚಿತ್ರಗಳು ನೇರವಾಗಿ ಒಂದೇ ದಿಕ್ಕಿನಲ್ಲಿ ಸಾಗಬಾರದೆಂದು ಕೊನೆಯ ದಿಕ್ಕಿಗೆ ಒಂದು ಕಲಾಕೃತಿಯನ್ನು ಎದುರು ಮುಖವಾಗಿ ಚಿತ್ರಿಸಿದ್ದು ಅದು ನೋಡುಗನ ಕಣ್ಣುಗಳ ಚಲನೆಯನ್ನು ತಡೆ ಹಿಡಿದು ಕಲಾಕೃತಿಗಳನ್ನು ಸ್ಪಷ್ಟವಾಗಿ ನೋಡುವ ಹಾಗೆ ಕೃತಿ ರಚಿಸಿದ್ದಾರೆ.

ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಾ ಕುಳಿತಿರುವ ವಿವಿಧ ಭಂಗಿಗಳಲ್ಲಿ ಕೃತಿಕರು ಹಾಗೂ ಬಸ್ಸಿಗಾಗಿ ಕಾದು ಅಲ್ಲಿಯೆ ನಿದ್ದೆಗೆ ಜಾರಿರುವುದು. ತಾಯಿ

ಮಗುವನ್ನು ಸಮಾಧಾನ ಪಡಿಸುತ್ತಿರುವುದು ಹೀಗೆ ಒಂದು ಬಸ್ ನಿಲ್ದಾಣದಲ್ಲಿ ಜನಸಂದನೀಯ ವಾತಾವರಣ ಯಾವ ರೀತಿಯಲ್ಲಿ ಕಂಡು ಬರುತ್ತದೆಯೋ ಅದೇ ರೀತಿಯಲ್ಲಿ ತಮ್ಮ ರೇಖಾ ಚಿತ್ರದಲ್ಲಿ ಸ್ಪಷ್ಟವಾದ ಆಕೃತಿಗಳಿಂದ ಕಲಾಕೃತಿ ರಚಿಸಿದ್ದಾರೆ.

ವಿವಿಧ ರೀತಿಯ ನೃತ್ಯಭಂಗಿಗಳು

ಇಲ್ಲಿ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಡೊಳ್ಳು ಭಾರಿಸುತ್ತಿರುವ ರೇಖಾ ಚಿತ್ರಗಳನ್ನು ಪಾರ್ಶ್ವ ನೋಟ, ಎದುರುನೋಟ, ಕುಳಿತ ಭಂಗಿ, ಮೇಲಕ್ಕೆ ಹಾರಿರುವುದು ಹೀಗೆ ಅನೇಕ ಮಗ್ಗುಲುಗಳಿಂದ ಶೀಘ್ರ ರೇಖೆಗಳಿಂದ ಚಿತ್ರಗಳನ್ನು ರಚಿಸಿ ಅವುಗಳಿಗೆ ವರ್ಣಲೇಪನ ಮಾಡಿದ್ದಾರೆ. ಇವುಗಳ ರೇಖೆಗಳ ವೇಗ, ಸ್ಪಷ್ಟತೆ, ಗಾಡವಾದ ವರ್ಣಗಳು ಸ್ಥಳ ಹೊಂದಾಣಿಕೆ ಸ್ಪಷ್ಟವಾಗಿ ಮೂಡಿಬಂದಿವೆ.

ಭರತನಾಟ್ಯದಲ್ಲಿ ಓಡಿಸ್ಸಿ, ಕಥಕ್, ಕುಚ್‌ಪುಡಿ ನೃತ್ಯಗಳನ್ನು ವೇಗಭರಿತ ರೇಖೆಗಳಲ್ಲಿ ಚಿತ್ರಿಸಿದ್ದು ವೇಗಭರಿತ ಮಹಿಳೆಯ ಭರತನಾಟ್ಯದ ಹಲವಾರು ಭಂಗಿಗಳನ್ನು ಸೂಕ್ಷ್ಮವಾದ ರೇಖೆಗಳಿಂದ ರೇಖೆಗಳಲ್ಲಿ ಪ್ರಮಾಣಬದ್ಧವಾಗಿ ಚಿತ್ರಗಳನ್ನು ರಚಿಸಿದ್ದಾರೆ. ಭರತನಾಟ್ಯದ ಉಡುಪುಗಳಲ್ಲಿ ನೀರಿಗೆಗಳು ಸ್ಪಷ್ಟವಾಗಿ ಕಾಣುವಂತೆ ಮತ್ತು ಶೃಂಗಾರಮಯ ಜೆಡೆಗಳು ಆಭರಣಗಳನ್ನು ರೇಖೆಗಳಲ್ಲಿ ಚಿತ್ರಿಸಿ ಅವುಗಳಿಗೆ ಪ್ರಥಮ ವರ್ಗದ ವರ್ಣಗಳನ್ನು ಬಳಸಿ ಕಲಾಕೃತಿಗಳನ್ನು ಶ್ರೀಮಂತಗೊಳಿಸಿದ್ದಾರೆ.

ರೇಖಾ ಭಾವಚಿತ್ರಗಳು

1982 ರಲ್ಲಿ ರಚಿಸಿದ ರವೀಂದ್ರನಾಥ ಟಾಗೋರ ಚಿತ್ರವನ್ನು ಪೆನ್ಸಿಲಿನಿಂದ ಬಾಹ್ಯರೇಖೆ ಚಿತ್ರಿಸಿ, ನೆರಳು ಬೆಳಕನ್ನು ಸೂಕ್ಷ್ಮವಾಗಿ ಎದುರು ನೋಟದಲ್ಲಿ ಚಿತ್ರಿಸಿದ್ದಾರೆ. ಕೇಸದ ವಿನ್ಯಾಸವನ್ನು ಗಮನಿಸಿದಾಗ ಅವುಗಳಲ್ಲಿಯ ನೆರಳು ಬೆಳಕಿನ ಸ್ಪಷ್ಟತೆ, ಕಣ್ಣಿಣ ದೃಷ್ಠಿಕೋನವನ್ನು ಸ್ಪಷ್ಟ ರೇಖೆಗಳ ಮುಖಾಂತರ ಚಿತ್ರಿಸಿದ್ದಾರೆ.

ಲಿಂಗರಾಜ ದೇಸಾಯಿ ಅವರ ಭಾವಚಿತ್ರದಲ್ಲಿ ತಲೆಯ ಮೇಲಿರುವ ರುಮಾಲು, ಕಿವಿಯಲ್ಲಿಯ ಓಲೆ, ಹಣೆಯ ಮೇಲಿನ ವಿಭೂತಿ ಗಮನಿಸಿದಾಗ ಅದರಲ್ಲಿನ ಸ್ಪಷ್ಟತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಮುಖದ ಮೇಲಿನ ಮೀಸೆ

ಧರಿಸಿರುವ ಕೋಟಗೆ ಕಪ್ಪು ಬಣ್ಣದ ಲೇಪನ ಮಾಡಿ ಮಿಶ್ರಶೈಲಿಯಲ್ಲಿ ಈ ಕಲಾಕೃತಿಯನ್ನು ರಚಿಸಿದ್ದಾರೆ.

ಎಸ್. ನಿಜಲಿಂಗಪ್ಪನವರ ಭಾವಚಿತ್ರವನ್ನು ಬಾಹ್ಯರೇಖಾ ಚಿತ್ರವನ್ನಾಗಿ ಚಿತ್ರಿಸಿ ನೆರಳು ಬೆಳಕನ್ನು ಚುಕ್ಕೆಗಳಿಂದ ಚಿತ್ರಿಸಿದ್ದಾರೆ. ಮುಖದಲ್ಲಿಯ ಹಾವಭಾವಗಳು ಅವರು ಧರಿಸಿರುವ ಕನ್ನಡಕ, ಬಟ್ಟೆಯಲ್ಲಿಯ ನೆರಳು ಬೆಳಕನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ನಮ್ಮ ದೇಶದ ಮಾಜಿ ಪ್ರಧಾನಮಂತ್ರಿ ಲಾಲ ಬಹಾದ್ದೂರ ಶಾಸ್ತ್ರಿಯವರ ಭಾವಚಿತ್ರವನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಕಲಾಕೃತಿಯಲ್ಲಿಯ ಮಂದಹಾಸದ ನಗು, ವಕ್ರದೃಷ್ಟಿ, ಯಚೇತ್ತವಾಗಿ ಮೂಡಿ ಬಂದಿವೆ. ಅವಶ್ಯಕ್ಕೆ ತಕ್ಕಹಾಗಿ ನೆರಳು, ಬೆಳಕು ಧರಿಸಿರುವ ಬಟ್ಟೆಯಲ್ಲಿ ಮೂಡಿಬಂದಿದೆ.

ಇಂದಿರಾಗಾಂಧಿಯ ಭಾವಚಿತ್ರವನ್ನು ಗಮನಿಸಿದಾಗ ಭಾವಚಿತ್ರದಲ್ಲಿ ಜೀವಂತತೆ ಎದ್ದು ಕಾಣುತ್ತದೆ. ಪಾರ್ಶ್ವನೋಟದಲ್ಲಿ ಚಿತ್ರಿಸಿ ಈ ಚಿತ್ರದಲ್ಲಿ ಕೊರಳಲ್ಲಿಯ ರುದ್ರಾಕ್ಷಿ ಮಣಿ, ಕಣ್ಣುಗಳ ಓರೆ ನೋಟ ಸ್ಪಷ್ಟವಾಗಿ ಮೂಡಿಬಂದಿವೆ. ಅದರಲ್ಲೂ ಕೇಶ ವಿನ್ಯಾಸವನ್ನು ಗಮನಿಸಿದಾಗ ವಾಚೇದಮಠ ಅವರ ರೇಖಾಲಾಲಿತ್ಯ ಎಂತಹದು ಎಂದು ತಿಳಿದು ಬರುತ್ತದೆ.

ಪೂರ್ಣ ಭಾವಚಿತ್ರಗಳು

ವಾಚೇದಮಠರು ಸಾಮಾನ್ಯವಾಗಿ ವಿದ್ಯಾಭ್ಯಾಸ ಮಾಡುವ ಸಂದರ್ಭದಲ್ಲಿ ಅನೇಕ ಭಾವ ಮತ್ತು ಪೂರ್ಣಭಾವಚಿತ್ರಗಳನ್ನು ರಚಿಸಿದ್ದಾರೆ. ಈಗಲೂ ರಚಿಸುತ್ತಿದ್ದಾರೆ. ವಿದ್ಯಾಭ್ಯಾಸದ ನಂತರದಲ್ಲಿ ಅವರು ತಮ್ಮ ಓಣಿಯಲ್ಲಿ ಬಂದಂತಹ ಭಿಕ್ಷುಕರನ್ನು ಕರೆದು ಅವರಿಗೆ ಹಣ ಕೊಟ್ಟು ಸಮಯವನ್ನು ನೀಡಿ ಅವರ ಪೂರ್ಣಭಾವಚಿತ್ರಗಳನ್ನು ಬಹುವರ್ಣಗಳಲ್ಲಿ ಹೆಚ್ಚು ಚಿತ್ರಿಸಿದ್ದಾರೆ.

ಭಿಕ್ಷುಕರ ಕಲಾಕೃತಿಗಳಲ್ಲಿ ಅಂಗರಚನಾಶಾಸ್ತ್ರದ ಪ್ರಮಾಣ ಬದ್ಧತೆ, ಅವರು ಧರಿಸಿರುವ ಹರಕು ಮುರುಕು ಬಟ್ಟೆಯ ಸ್ಪಷ್ಟತೆ, ಅವರ ಕೇಶವಿನ್ಯಾಸ, ನಿಂತಿರುವ ಭಂಗಿಯನ್ನು ಸ್ಪಷ್ಟವಾಗಿ ಚಿತ್ರಿಸಿ ವರ್ಣಗಳ ಮುಖಾಂತರ ಜೀವಂತಿಕೆ ನೀಡಿದ್ದಾರೆ. ಹಿನ್ನೆಲೆಯಲ್ಲಿ ಸ್ಪಷ್ಟವಾದ ಯಥಾದರ್ಶನದ ಮುಖಾಂತರ ಹಳ್ಳಿಯ ಬೀದಿಯನ್ನು ಚಿತ್ರಿಸಿದ್ದಾರೆ.

ತಾಯಿ ಮಗುವಿಗೆ ಎದೆಹಾಲು ನೀಡುತ್ತಿರುವ ದೃಶ್ಯದಲ್ಲಿ ಮಗುವಿಗೆ ಕೃಷ್ಣವರ್ಣವನ್ನು ಲೇಪಿಸಿದ್ದಾರೆ. ತಾಯಿಯ ಉಡುಗೆ ತೊಡುಗೆ ಕೇಶವಿನ್ಯಾಸ, ಕುಳಿತಿರುವ ಭಂಗಿಯನ್ನು ಸ್ಪಷ್ಟವಾಗಿ ಚಿತ್ರಿಸಿ ಮಗುವಿನ ಆರೈಕೆ ಎನ್ನುವುದನ್ನು ತಿಳಿಸಿದ್ದಾರೆ.

ಸಂಯೋಜನಾ ಚಿತ್ರಗಳು

ಮದುಮಗಳ ಶೃಂಗಾರ : 2007 ರಲ್ಲಿ ಈ ಕಲಾಕೃತಿಯು ಪೋಸ್ಟರ ಮಾಧ್ಯಮದಲ್ಲಿ ರಚಿಸಿದ್ದಾರೆ. ಮದುಮಗಳನ್ನು ಎಂಟು ಜನ ಮಹಿಳೆಯರು ಶೃಂಗರಿಸಲು ಮುಂದಾಗಿದ್ದಾರೆ. ಮದುಮಗಳ ಹಿಂದೆ ಗ್ರಹಿಣೆಯೊಬ್ಬರು ಕೇಶವಿನ್ಯಾಸ ಮಾಡುತ್ತಿದ್ದಾರೆ. ಇನ್ನೊರ್ವ ಮಹಿಳೆ ಹೂಗಳನ್ನು, ಇನ್ನಿಬ್ಬರು ಮಹಿಳೆಯರು ಬಂಗಾರದ ಆಭರಣಗಳನ್ನು ತರುತ್ತಿದ್ದಾರೆ. ಅದರಲ್ಲಿ ಇಬ್ಬರು ಬಾಲಕಿಯರ ವಸ್ತ್ರವಿನ್ಯಾಸ ಸ್ಪಷ್ಟವಾಗಿದ್ದು ಆಕೃತಿಗಳಲ್ಲಿ ಚಲನಶೀಲತೆಯನ್ನು ಕಾಣಬಹುದು. ಶೃಂಗಾರಕ್ಕೆ ಬೇಕಾದ ವಸ್ತುಗಳನ್ನು ಪಕ್ಕದಲ್ಲಿ ಹೊಂದಾಣಿಕೆಯಿಂದ ಚಿತ್ರಿಸಿದ್ದಾರೆ. ಈ ಸಂಯೋಜನ ಚಿತ್ರದಲ್ಲಿ ಕೆಲವು ಸ್ತ್ರೀಯರಿಗೆ ಕಪ್ಪುವರ್ಣ, ಇನ್ನೂ ಕೆಲವರಿಗೆ ಕೆಂಪು ಮಿಶ್ರಿತ ಹಳದಿ ವರ್ಣವನ್ನು ಲೇಪಿಸಿದ್ದಾರೆ. ಶೃಂಗಾರ ಮಾಡುತ್ತಿರುವ ಕೋಣೆಯ ಯಥಾದರ್ಶನವನ್ನು ಸ್ಪಷ್ಟವಾಗಿ ಚಿತ್ರಿಸಿ ಕಿಟಕಿಯ ಹೊರಭಾಗದಲ್ಲಿ ನಿಸರ್ಗ ಚಿತ್ರವನ್ನು ಚಿತ್ರಿಸಿ ಯಥಾದರ್ಶನದ ಮಹತ್ವವನ್ನು ಈ ಕೃತಿಯಲ್ಲಿ ತೋರಿಸಿದ್ದಾರೆ. ಈ ಕೃತಿಯಲ್ಲಿ ಮೂಲವರ್ಣಗಳಿಗೆ ಇತರ ವರ್ಣಗಳನ್ನು ಬೆರಸಿ ಅದರಿಂದ ಬರುವ ವಿವಿಧ ರೀತಿಯ ವರ್ಣಗಳನ್ನು ಲೇಪನಮಾಡಿದ್ದಾರೆ. ಈ ಕೃತಿಯು ನೋಡುಗರ ಕಣ್ಣುಗಳ ಚಲನಶೀಲತೆಯನ್ನು ತಡೆದು ಒಟ್ಟಾರೆ ಕಲಾಕೃತಿಯನ್ನು ವೀಕ್ಷಿಸುವಂತೆ ಮಾಡುತ್ತದೆ.

ದೇವಸ್ಥಾನಕ್ಕೆ ಹೊರಟಿರುವದು : ಸಾಮಾನ್ಯವಾಗಿ ಮದುವೆ ಸಂದರ್ಭದಲ್ಲಿ ಮದುಮಗಳನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗುವ ಪದ್ಧತಿ ನಮ್ಮಲ್ಲಿದೆ. ಈ ಕೃತಿಯು ಪೋಸ್ಟರ ವರ್ಣ ಮಾಧ್ಯಮದಿಂದ ರಚಿಸಿದ್ದಾರೆ. ಕೃತಿಯಲ್ಲಿ 13 ಕಲಾಕೃತಿಗಳಿವೆ. ಮೆರವಣಿಗೆಯಲ್ಲಿ ವಾದ್ಯಗಳೊಂದಿಗೆ ನಾಲ್ಕು ಜನರ ತಂಡ, ಸಂಗೀತವನ್ನು ನುಡಿಸುತ್ತ ಮುಂದೆ ಸಾಗುತ್ತಿದ್ದಾರೆ. ಹಿನ್ನೆಲೆಯಲ್ಲಿ ಮದುಮಗಳು ಮತ್ತು ಅವರ ಬಂಧುಗಳನ್ನು ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಬೆಟ್ಟಗಳ ಸಾಲನ್ನು ಚಿತ್ರಿಸಿ, ಊರಿನಿಂದ ಹೋರಗಡೆ ಬಂದಿರುವ ಕಲ್ಪನೆಯನ್ನು ಈ ಕೃತಿಯಲ್ಲಿ ತೋರಿಸಿದ್ದು, ಕೆಲವು ಗಾಢವಾದ ವರ್ಣಗಳು, ಕೆಲವು ಕಣ್ಣಿಗೆ ಮುದ ನೀಡುವ

ವರ್ಣವನ್ನು ಬಳಸಿ ಕಲಾಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ. ಕಲಾಕೃತಿಯಲ್ಲಿರುವ ಹದಿಮೂರು ಆಕೃತಿಗಳು ಪ್ರಮಾಣಬದ್ಧವಾಗಿವೆ. ಮದುಮಗಳ ಮುಖದಲ್ಲಿ ಮತ್ತು ಅವರ ಬಂಧುಗಳ ಮುಖಗಳಲ್ಲಿ ಮದುವೆ ಸಂಭ್ರಮದ ಸಂತೋಷವನ್ನು ಈ ಕೃತಿಯಲ್ಲಿ ಇಮ್ಮಡಿಗೊಳಿಸಿದ್ದಾರೆ.

ರಾಶಿ ಪೂಜೆ : ರೈತರು ಒಂದೊಂದು ಪ್ರಾದೇಶಿಕ ಹಿನ್ನೆಲೆಯಲ್ಲಿ ಒಂದೊಂದು ಬಗೆಯ ಹಬ್ಬದ ಆಚರಣೆಗಳನ್ನು ಮಾಡುತ್ತಾ ಬರುತ್ತಾರೆ. ಉತ್ತರ ಕರ್ನಾಟಕದ ಭಾಗದಲ್ಲಿ ಹೆಚ್ಚಾಗಿ ರೈತರು ರಾಶಿಪೂಜೆಯನ್ನು ಮಾಡಿ ಹೊಲಗಳಲ್ಲಿ ದುಡಿದ ರೈತರಿಗೆ ಕಾಳು ಕಡಿಯನ್ನು ನೀಡುವ ಪದ್ಧತಿ ಇದೆ. ಅಂತಹ ಒಂದು ಸ್ಪಷ್ಟ ಚಿತ್ರಣವನ್ನು ಹದಿಮೂರು ಆಕೃತಿಗಳನ್ನು ಬಳಸಿಕೊಂಡು ಪೋಸ್ಟರ ಮಾಧ್ಯಮದಲ್ಲಿ ಚಿತ್ರಿಸಿದ್ದಾರೆ. ಹೊಲದ ಮಾಲಿಕನ ಆಜ್ಞೆಯಂತೆ ರೈತ ದವಸ ಧಾನ್ಯವನ್ನು ನೀಡುತ್ತಿದ್ದಾನೆ. ಕೆಲವರು ದವಸಧಾನ್ಯವನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಇನ್ನು ಕೆಲವರು ಚರ್ಚೆ ಮಾಡುತ್ತಿರುವುದು ಗಮನಾರ್ಹವಾಗಿದೆ. ಮತ್ತು ರೈತರ ಜೊತೆಗೆ ಆಗಮಿಸುತ್ತಿರುವ ಶ್ವಾನವು ಈ ಕಲಾಕೃತಿಗೆ ಮೆರಗು ನೀಡಿದೆ.

ಫಿಶ್ ಮಾರ್ಕೆಟ್ : ಈ ಕಲಾಕೃತಿಯನ್ನು 2008 ರಲ್ಲಿ ಪೋಸ್ಟರ ಮಾಧ್ಯಮದಲ್ಲಿ ರಚಿಸಿದ್ದಾರೆ. ಮೀನವನ್ನು ಮಾರುತ್ತಿರುವ ವ್ಯಕ್ತಿಯೊಬ್ಬನನ್ನು ಪ್ರಧಾನವಾಗಿ ಚಿತ್ರಿಸಿದ್ದು, ಆತ ಅರೆನಗ್ನದಲ್ಲಿದ್ದುದನ್ನು ಗಮನಿಸಿದರೆ ವಾಚೇದಮಠವರು ಅಭ್ಯಾಸ ಮಾಡಿದ ಅಂಗರಚನಾಶಾಸ್ತ್ರವನ್ನು ಸ್ಪಷ್ಟವಾಗಿ ದುಡಿಸಿಕೊಂಡಂತೆ ಕಾಣುತ್ತದೆ. ಕೊರಳು ಮತ್ತು ಕೈಯಲ್ಲಿ ಆಭರಣಗಳು, ಹಣೆಗೆ ಅಲಂಕರಿಸಿದ ಬಟ್ಟೆ, ಕಾಲಿಗೆ ಧರಿಸಿದ ರಿಂಗ್ ಕೃತಿಯ ಸೌಂದರ್ಯವನ್ನು ಹೆಚ್ಚಿಸಿದೆ. ವ್ಯಕ್ತಿ ಮೀನು ಖರೀದಿದಾರರನ್ನು ನೀರಿಕ್ಷೆ ಮಾಡುತ್ತಿರುವ ಭಾವನೆಯನ್ನು ಮುಖದಲ್ಲಿ ಎಚೇತ್ತವಾಗಿ ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಕೆರೆ ಮತ್ತು ಸುತ್ತಲೂ ಮಹಿಳೆಯರು ಮೀನುಗಳನ್ನು ಹಿಡಿದು ಬುಟ್ಟಿಯಲ್ಲಿ ಹಾಕುವುದನ್ನು ಗಮನಿಸಬಹುದು. ಈ ಚಿತ್ರದಲ್ಲಿ ವರ್ಣಗಳ ವಿನ್ಯಾಸ, ಯಥಾದರ್ಶನ ಸ್ಪಷ್ಟವಾಗಿ ಮೂಡಿಬಂದಿದೆ.

ಮೀನುಗಳನ್ನು ಶೇಖರಿಸುತ್ತಿರುವುದು : ಈ ಕಲಾಕೃತಿಯ ಹಿನ್ನೆಲೆಯಲ್ಲಿ ಸಮುದ್ರವನ್ನು ಚಿತ್ರಿಸಿದ್ದು, ಮೀನುಗಳನ್ನು ಬುಟ್ಟಿಯ ಶೇಖರಿಸಿ ಲೆಕ್ಕ ಹಾಕುತ್ತಿರುವುದು, ಎಡ ಮತ್ತು ಬಲಗಡೆ ಆತನಿಗೆ ಸಹಕರಿಸುತ್ತಿರುವ ಮಹಿಳೆಯೋರ್ವಳು ಕೈಯಲ್ಲಿ ಒಂದು ಮೀನು ಹಿಡಿದುಕೊಂಡು ಬರುತ್ತಿರುವ ಸನ್ನಿವೇಶ, ಹಿನ್ನೆಲೆಯಲ್ಲಿ

ಮಹಿಳೆಯರು ಮೀನುಗಳನ್ನು ಕಟ್ಟಿಗೆಗೆ ಒಣ ಹಾಕುತ್ತಿರುವ ದೃಶ್ಯವನ್ನು ಕಾಣಬಹುದು. ಮುನ್ನಲೆಯಲ್ಲಿ ಗಾಢವಾದ ವರ್ಣಗಳನ್ನು ಬಳಸಿ ಕೃತಿ ಮೆರಗು ನೀಡಿದ್ದಾರೆ. ಈ ಕೃತಿಯಲ್ಲಿ ಒಂಭತ್ತು ಆಕೃತಿಗಳನ್ನು ಚಿತ್ರಿಸಿ ಸ್ಥಳ ಹೊಂದಾಣಿಕೆ ಮಾಡಿಕೊಂಡು ಯಥಾದರ್ಶನವನ್ನು ಸ್ಪಷ್ಟವಾಗಿ ಚಿತ್ರಿಸಿದ್ದು ಕಂಡುಬರುತ್ತದೆ. ಮಿನುಗಾರರ ಕೆಲವು ಚಿತ್ರಗಳ ಹಿನ್ನೆಲೆಯಲ್ಲಿ ಕೆರೆ, ಹೊಂಡಗಳುನ್ನು ಚಿತ್ರಿಸಿದರೆ, ಇನ್ನೂ ಕೆಲವು ಚಿತ್ರಗಳಲ್ಲಿ ಸಮುದ್ರವನ್ನು ಚಿತ್ರಿಸಿದ್ದು ಕಂಡುಬರುತ್ತದೆ.

ಮದುವೆ : ಕೆಲವು ಕಲಾಕೃತಿಗಳಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚು ಆಕೃತಿಗಳನ್ನು ಚಿತ್ರಿಸಿದ್ದು, ಆದರೆ ಮದುವೆ ಕೃತಿಯಲ್ಲಿ ಮೂರು ಆಕೃತಿಗಳನ್ನು ಬಳಸುವುದರ ಮುಖಾಂತರ ಮದುವೆ ಎನ್ನುವ ಅರ್ಥವನ್ನು ಸಂಭ್ರಮ ತೋರಿಸಿದ್ದಾರೆ. ಈ ಮದುವೆ ಆಲದ ಮರದ ಕೆಳಗಡೆ ನಡೆಯುತ್ತಿದ್ದು, ಮದುಮಗ, ಮದುಮಗಳು ಅಗ್ನಿ ಕುಂಡದ ಸುತ್ತಲೂ ಸಪ್ತಪದಿ ತುಳಿಯುತ್ತಿದ್ದಾರೆ. ಹಿನ್ನೆಲೆಯಲ್ಲಿ ಗೃಹಿಣೆಯೊರ್ವಳು ಆರತಿ ತರುತತ್ತಿರುವುದು ಗಮನಾರ್ಹವಾಗಿದೆ. ಉತ್ತರ ಕರ್ನಾಟಕದ ಸಂಪ್ರದಾಯದಂತೆ ಮದುಮಗ, ಮದುಮಗಳ ಹಣೆಗೆ ಬಾಸಿಂಗ್, ಕೈಯಲ್ಲಿ ತೆಂಗಿನಕಾಯಿ, ಮದುಮಗನ ಕೈಯಲ್ಲಿ ಬರ್ಚಿಯನ್ನು ಹಿಡಿದಿರುವುದು ಕಂಡು ಬರುತ್ತದೆ. ಪಕ್ಕದಲ್ಲಿಯೇ ಹಾಲಗಂಬವನ್ನು ಗಮನಿಸಬಹುದು. ವರ್ಣಗಳ ಸಂಯೋಜನೆಯ ಸ್ಥಳಾವಕಾಶಕ್ಕೆ ಹೆಚ್ಚು ಮಹತ್ವ ಪಡೆದಿದೆ. ಇನ್ನು ಶುಖಭಾಷಿಣಿ, ವೀಣಾಪಾಣಿ, ಮೃದಂಗ ಬಾರಿಸುವ, ವಲಸೆಗಾರ, ಶೃಂಗಾರ, ರಾಶಿ ಮಾಡುತ್ತಿರುವ ಗೃಹಿಣಿ ಹೀಗೆ ಅನೇಕ ಕಲಾಕೃತಿಗಳು ಮಹತ್ವದ ಸ್ಥಾನವನ್ನು ಪಡೆದುಕೊಂಡಿವೆ.

ಇವರ ವರ್ಣಚಿತ್ರಗಳಲ್ಲಿ ಅಲಂಕಾರಿಕ ಶೈಲಿಯನ್ನು ಬಳಸಿಕೊಳ್ಳಲಾಗಿದೆ. ಅಲ್ಲದೆ ವಸ್ತು ವಿಷಯಗಳಲ್ಲಿ ಹೆಚ್ಚಾಗಿ ಗ್ರಾಮ್ಯ ಜೀವನ ಶೈಲಿಯ ಚಿತ್ರಗಳನ್ನು ಕಾಣಬಹುದು. ಕೆಲವು ಕಲಾಕೃತಿಗಳಲ್ಲಿ ಸಂದೇಶ ನೀಡುವ ಅನಿವಾರ್ಯತೆಯನ್ನು ಕಾಣಬಹುದು. ಇದೆಲ್ಲಕ್ಕಿಂತ ಇಲ್ಲಿರುವ ಹಲವು ಅಕಾಡೆಮಿಕ್ ಶೈಲಿಯ ಚಿತ್ರಗಳನ್ನು ನಾವು ವಿಶೇಷವಾಗಿ ಪರಿಗಣಿಸಬೇಕು. ಅವರ ಕಲಾಕೃತಿಗಳಲ್ಲಿಯ ವರ್ಣವಿನ್ಯಾಸ, ಯಥಾದರ್ಶನ, ಮೈವಳಿಕೆ ಹೀಗೆ ಹಲವಾರು ಚಿತ್ರಗಳನ್ನು ಅನನ್ಯವಾಗಿಸಿವೆ. ರೇಖೆಗಳಲ್ಲಿ ನಿರ್ಧಿಷ್ಟ ವೇಗಗಳು, ಎಲ್ಲಿಯೂ ದಾರಿತಪ್ಪದ ಪೆನ್ನು ಪೆನ್ಸಿಲ್ ಪವಾಡ ಸದೃಶ್ಯ ಚಿತ್ರಗಳನ್ನು ಸೃಷ್ಟಿಸಿದ್ದು, ಇದೊಂದು ಅಪೂರ್ವ ಸಂಗ್ರಹ ಎಂದೇ ಹೇಳಬಹುದು.

ಇನ್ನೂ ಇವರ ಆಯ್ಕೆಯ ಬಣ್ಣಗಳ ಸೂಕ್ಷ್ಮತೆಯ ಬಗ್ಗೆ ಒಂದಿಷ್ಟು ಹೇಳಬೇಕು. ಹೆಚ್ಚಾಗಿ ಪ್ರಾಥಮಿಕ ಬಣ್ಣಗಳಿಗಿಂತ ಸಂಕೀರ್ಣ ಹಾಗೂ ಮೃದುವಾದ ಸಹಜ ಬಣ್ಣಗಳು ಇವರನ್ನು ಹೆಚ್ಚು ಆಕರ್ಷಣೆ ಮಾಡಿದಂತಿವೆ. ನೇರಳೆ, ಹಳದಿ, ಕೆಂಪು ಬಣ್ಣಗಳು ಇವರ ಕೈಯಲ್ಲಿ ಸರಿಯಾಗಿ ಪಳಗಿವೆ ಎಂಬುದನ್ನು ಇವರ ಕಲಾಕೃತಿಗಳನ್ನು ನೋಡಿದಾಗ ಅರ್ಥ ಮಾಡಿಕೊಳ್ಳಬಹುದು. ಬಣ್ಣದ ಗೆರೆಗಳನ್ನು ಸಮೀಕರಿಸಿ ನೋಡಿದಾಗ ಅವಿನಾಭಾವದೊಂದಿಗೆ ಜನಸಾಮಾನ್ಯರಿಗೂ ಎಟಕುವ ಅಸಮಾನ್ಯರಿಗೂ ಒಪ್ಪುವ ನೈಜ ಶೈಲಿಯಲ್ಲಿಯೇ ಮುಂದುವರಿದು ಇವರ ಕಲಾಕೃತಿಗಳು ಸಾರ್ಥಕತೆ ಪಡೆದಿವೆ. ಎಂ. ಜಿ. ವಾಚೇದಮಠ ಅವರ ಕಲಾಕೃತಿಗಳು ಯಾರಿಗೂ ನಿರಾಶೆ ಮೂಡಿಸುವುದಿಲ್ಲ ಅವರಲ್ಲಿರುವ ಅದ್ಭುತ ಕರಕುಶಲತೆ ಎಂತವರನ್ನಾದರೂ ಮಣಿಸಿ ಬಿಡುತ್ತದೆ.

ಸೃಜನಶೀಲ ಪ್ರವೃತ್ತಿ ಹೊಸ ಹೊಸ ಹೊಸ ಅನುಭವಗಳಿಗೆ ತನ್ನನ್ನು ಒಡ್ಡಿಕೊಳ್ಳುವಾಗ ಉಂಟಾಗುವ ರಸಾನುಭೂತಿಯನ್ನು ಆ ಕ್ಷಣದಲ್ಲೇ ಸೆರೆ ಹಿಡಿಯುವ ಆತರಕ್ಕೆ ಪೂರ್ವಸಿದ್ಧತೆ ಅಗತ್ಯವೆಂದೇ ಎಂ. ಜಿ. ವಾಚೇದಮಠವರು ತಾವು ಹೋಗುವ ಕಡೆಗೆಲ್ಲ ಇಂದಿಗೂ ಸ್ಕೆಚ್‌ಬುಕ್ ಕೊಂಡೊಯ್ಯುತ್ತಾರೆ. ಇಂದು ಅವರ ಸಾವಿರಾರು ಸ್ಕಚ್‌ಬುಕ್ ಅವರ ಸಾಧನೆಗೆ ಕೈಗನ್ನಡಿಯಾಗಿವೆ. ಒಂದು ನೃತ್ಯ ಕಾರ್ಯಕ್ರಮವನ್ನು ವೀಕ್ಷಿಸುವಾಗ ಅವರ ಕಣ್ಣಿಗೆ ಆಕರ್ಷಕವಾಗಿ ಕಾಣುವ ನೃತ್ಯದ ಭಂಗಿ, ಒಂದು ಸಂಗೀತ ಸಭೆಯಲ್ಲಿ ಕಲಾವಿದನ ಪ್ರತಿಭೆ ಮಿಂಚುವ ಒಂದು ಕ್ಷಣ, ಹಾದಿಯಲ್ಲಿ ಕಾಣಬಹುದಾದ, ಬದುಕಿಗೆ ಹೊಂದಿಕೊಳ್ಳ ಬಯಸುವ ಸಾಮನ್ಯ ನಾಗರಿಕರ ಜೀವನದಲ್ಲಿ ನೊವನ್ನೋ ನಗುವನ್ನೋ ತೋರಿಸುವ ಒಂದು ದೃಶ್ಯ ಇವೆಲ್ಲ ಕಲಾವಿದನ ಸೃಜನಶೀಲ ಪ್ರವೃತ್ತಿಯನ್ನು ಕೆಣಕಬಹುದು. ಅಂತಹ ಸಂದರ್ಭದಲ್ಲಿ ವಾಚೇದಮಠರು ತಮ್ಮ ಕೈಯಲ್ಲಿ ಸ್ಕಚ್‌ಬುಕ್ ಇರದ ಸಂದರ್ಭದಲ್ಲಿ ಸಿಕ್ಕಿದ ತುಂಡು ಕಾಗದ, ಹಳೆಯ ಲಕೋಟೆ, ಬಸ್ ಟಿಕೇಟನ ಹಿಂಬದಿಯ ಖಾಲಿ ಜಾಗದಲ್ಲಿ ತಮ್ಮ ಅನುಭವಕ್ಕೆ ರೂಪಕೊಟ್ಟಿದ್ದನ್ನು ನಾವು ಕಾಣುತ್ತೇವೆ.

ಸ್ಥಿರ ಚಿತ್ರಣಗಳು

ವಾಚೇದಮಠ ಅವರು ಈತ್ತೀಚೆಗೆ ಅಂದರೆ 2008 ರಲ್ಲಿ ಅನೇಕ ಕಲಾಕೃತಿಗಳನ್ನು ತೈಲವರ್ಣ, ಜಲವರ್ಣ, ಪೋಸ್ಟರ ವರ್ಣ, ಪೆನ್ಸಿಲ್,

ಚಾರಕೂಲಗಳ ಬಳಕೆಯಿಂದ ರಚಿಸಿದ್ದಾರೆ. ಅವುಗಳಲ್ಲಿ ಸ್ಥಿರ ಚಿತ್ರಣವು ಒಂದು ಇಲ್ಲಿ ವಿವಿಧ ಬಗೆಯ ದಿನನಿತ್ಯ ಗೃಹ ಬಳಕೆಗೆ ಉಪಯೋಗಿಸುವ ವಸ್ತುಗಳನ್ನು ಬಳಸಿ ಕಲಾಕೃತಿಗಳನ್ನು ರಚಿಸಿದ್ದಾರೆ.

ಒಂದರ ಎದುರಿಗೆ ಒಂದು ಡಬ್ಬ ಅದರ ಮೇಲೆ ಒಂದು ಮುಚ್ಚಳ. ಮುಚ್ಚಳದ ಮೇಲೆ ಚಿಕ್ಕದಾದ ಪ್ಲಾಸ್ಟಿಕ್ ಬರಣಿ, ಬರಣಿಯ ಮೇಲೆ ಚಿಪ್ಪಿನಾಕಾರದ ಬಟ್ಟಲು ಅದರ ಮೇಲೆ ಸೇಬುಹಣ್ಣು, ಅಕ್ಕ ಪಕ್ಕದಲ್ಲಿ ಬೃಹದ್ದಾಕಾರದ ಬಾಟಲಗಳು, ಹಿಂಬಾಗ ಕಾಗದದ ವೃತ್ತ ಎದುರಿಗೆ ಸಾಬೂನು, ಟೊಮೆಟೊ, ಲಿಂಬೆಹಣ್ಣುಗಳನ್ನು ಬಿಡಿ ಬಿಡಿಯಾಗಿ ಇಟ್ಟು ಸ್ಪಷ್ಟವಾದ ಅಭ್ಯಾಸವನ್ನು ಮಾಡಿದ್ದಾರೆ. ವಸ್ತುಗಳಲ್ಲಿದ್ದ ಮೂಲವರ್ಣಗಳನ್ನು ನೈಜತೆಗೆ ತರಲು ಶ್ರಮಪಟ್ಟಿದ್ದಾರೆ. ನೆರಳು ಬೆಳಕಿನ ವಿನ್ಯಾಸ, ಯಥಾದರ್ಶನ, ಸ್ಥಳ ಹೊಂದಾಣಿಕೆಯನ್ನು ಎತೇಚ್ಛವಾಗಿ ಚಿತ್ರಿಸಿದ್ದಾರೆ.

ಇನ್ನೊಂದು ಚಿತ್ರದಲ್ಲಿ ಭರಣಿ, ಮುಚ್ಚಳ, ಬಾಟಲ್, ಕಬ್ಬು, ಗಜ್ಜರಿ, ಟೊಮೆಟೊ, ಸವತೆಕಾಯಿ ಇನ್ನಿತರ ದಿನ ನಿತ್ಯದ ವಸ್ತುಗಳನ್ನು ಬಿಡಿ ಬಿಡಿಯಾಗಿ ಇರಿಸಿ ಅವುಗಳಲ್ಲಿಯ ಮೂಲ ವರ್ಣಗಳನ್ನು ಜಲವರ್ಣ ಮಾಧ್ಯಮದಿಂದ ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಬಟ್ಟೆಯನ್ನು ಹಾಕಿ ಅವುಗಳಲ್ಲಿ ನೆರಳು ಬೆಳಕನ್ನು ಎತೇಚ್ಛವಾಗಿ ಚಿತ್ರಿಸಿದ್ದಾರೆ. ಇದರಲ್ಲೂ ಪ್ರತಿಯೊಂದು ವಸ್ತುವಿನ ಆಕಾರವನ್ನು ಸ್ಪಷ್ಟವಾಗಿ ಗಮನಿಸಿ ಕಲಾಕೃತಿಗಳಿಗೆ ಜೀವಂತಿಕೆ ನೀಡಿದ್ದಾರೆ.

ವಾಚೇದಮಠ ಅವರು ಸ್ಥಿರ ಚಿತ್ರಣದಲ್ಲಿ ಬಳಸಿದ ಪ್ರತಿಯೊಂದು ವಸ್ತುವನ್ನು ಹಾಗೂ ಎಲ್ಲ ರೀತಿಯ ತರಕಾತಿಗಳನ್ನು ಅವುಗಳಲ್ಲಿರುವ ಗುಣಧರ್ಮಗಳನ್ನು ಸ್ಪಷ್ಟವಾಗಿ ಚಿತ್ರಿಸುವುದರ ಮುಖಾಂತರ ಎಲ್ಲ ನಿರ್ಜಿವ ವಸ್ತುಗಳಿಗೆ ಜೀವ ತುಂಬಿರುವುದು ಗಮನಾರ್ಹವಾಗಿದೆ.

ಪ್ರಕೃತಿ ಚಿತ್ರಗಳು

ಸಂಯೋಜನಾ ಚಿತ್ರ, ಭಾವಚಿತ್ರದ ರಚನಾ ತಂತ್ರದಡಿಯಲ್ಲಿ ರಚಿಸಲ್ಪಟ್ಟ ಚಾರಿತ್ರಿಕ ಅವಶೇಷವೊಂದರ ಚಿತ್ರಗಳಿವು ಪ್ರಕೃತಿ ಚಿತ್ರಗಳಲ್ಲಿ ಎರಡು ಬಗೆಯ ಪ್ರತ್ಯೇಕ ಲಕ್ಷಣಗಳನ್ನು ಸಮರ್ಥವಾಗಿ ಗ್ರಹಿಸಿ ಕುಂಚದಲ್ಲಿ ಸೆರೆಹಿಡಿದಿದ್ದಾರೆ. ಪ್ರಕೃತಿಯಲ್ಲಿನ ಒಳಾವರಣ ಮತ್ತು ಹೊರಾವರಣದ ವ್ಯವಸ್ಥಿತಗೊಂಡ ನೆರಳು ಬೆಳಕಿನ ಪರಿಣಾಮಗಳನ್ನು ಇವರ ಪ್ರಕೃತಿ ಚಿತ್ರಗಳಲ್ಲಿ ಕಾಣಬಹುದು. ನೆರಳು ಮತ್ತು ಬಿಸಿಲುಗಳ ಛಾಯೆಗಳು ಪ್ರತಿ ಚಿತ್ರರಚನೆಯಲ್ಲಿ ಪ್ರಬುದ್ಧವಾಗಿದೆ.

ವಾಚೇದಮಠ ತಾವು ವಾಸಿಸುತ್ತಿದ್ದ ಸುತ್ತಮುತ್ತಲಿನ ಪ್ರದೇಶವಲ್ಲದೆ ಐತಿಹಾಸಿಕ ಸ್ಥಳಗಳಾದ ಬಾದಾಮಿ, ಪಟ್ಟದಕಲ್ಲು, ಐಹೊಳೆ ಹೀಗೆ ಅನೇಕ ಕಡೆ ಪ್ರಕೃತಿ ಚಿತ್ರಣಗಳ ಕುರಿತು ಅಭ್ಯಾಸಿಸಿದ್ದಾರೆ. ಅವುಗಳಲ್ಲಿ ಪಟ್ಟದಕಲ್ಲಿನ ದೇವಾಲಯಗಳು ವಿಶೇಷ. ಪ್ರಕೃತಿ ಚಿತ್ರಣವನ್ನು ಸ್ಪಷ್ಟವಾಗಿ ರೇಖಿಸಿ ವರ್ಣಗಳನ್ನು ಲೇಪಿಸಿದ್ದಾರೆ. ಅಲ್ಲದೆ ಸ್ಪಷ್ಟವಾದ ನೆರಳು ಬೆಳಕನ್ನು ಗುರುತಿಸಿದ್ದಾರೆ.

ಪ್ರಕೃತಿ ಚಿತ್ರಗಳಲ್ಲಿ ಜಲವರ್ಣದೊಳಗೆ ಬಳಸಬಹುದಾದ ವರ್ಣಪಾರದರ್ಶಕತೆಯ ಹಲವಾರು ಎರಿಳಿತಗಳನ್ನು ವರ್ಣಗಳನ್ನು ಕಾಣಬಹುದು. ಕಲ್ಲಿನಿಂದ ನಿರ್ಮಿಸಿದ ಕೋಟೆಗಳು, ಮನೆಗಳ ದೃಶ್ಯಗಳ ಯಥಾದರ್ಶನವನ್ನು ಸ್ಪಷ್ಟವಾಗಿ ರೇಖಿಸಿದ್ದಾರೆ. ಕಲಾಕೃತಿಗಳಲ್ಲಿ ಸೂಕ್ಷ್ಮ ವಸ್ತುಗಳನ್ನು ಸಹಿತ ತದೇಕ ಚಿತ್ತದಿಂದ ರಚಿಸಿದ್ದು ಕಂಡುಬರುತ್ತದೆ. ಇನ್ನು ಕೆಲವು ಕೃತಿಗಳಲ್ಲಿ ಮಂದಿರವನ್ನೆ ಪ್ರಮುಖವಾಗಿ ಚಿತ್ರಿಸಿ ಕಲ್ಲಿನ ನೈಜತೆಗಳನ್ನು ವರ್ಣಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಕೃತಿಗೆ ಹೊಂದಾಣಿಕೆಯಾಗುವಂತೆ ಸ್ಥಳ ಹೊಂದಾಣಿಕೆ ಮಾಡಿಕೊಂಡಿರುವುದು ಕಂಡು ಬರುತ್ತದೆ.

ಕೆಲವು ಕೃತಿಗಳನ್ನು ಗಮನಿಸಿದಾಗ ಛಾಯಾಚಿತ್ರಗಳೆನ್ನುವಷ್ಟು ಸ್ಪಷ್ಟಿಕರಣ ನೀಡುತ್ತವೆ. ಇನ್ನು ಕೆಲವು ಕೃತಿಗಳಲ್ಲಿ ನೆರಳು ಬೆಳಕನ್ನು ಗಮನಿಸಿದಾಗ ಸಮಯವನ್ನು ತಿಳಿಸಿಕೊಡುವಂತೆ ಕಾಣುತ್ತವೆ.

ಎಂ. ಜಿ. ವಾಚೇದಮಠ ಅವರು ತಮ್ಮ ಬದುಕಿನುದ್ದಕ್ಕೂ ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಈಗಲೂ ಅವರು ತಮ್ಮ ಎಪ್ಪತ್ತೇಳನೆಯ ಇಳಿಯ ವಯಸ್ಸಿನಲ್ಲೂ ಕಲಾಕೃತಿಗಳನ್ನು ರಚಿಸುತ್ತಿದ್ದಾರೆ. ಇಲ್ಲಿ ಅವರ ಆಯ್ದ ಕಲಾಕೃತಿಗಳನ್ನು ಮಾತ್ರ ವಿವರಿಸಲಾಗಿದೆ.

ವ್ಯಕ್ತಿ ಪರಿಚಯ

ಚಿತ್ರಕಲಾವಿದ ಎಮ್. ಜಿ. ವಾಚೇದಮಠ

ಜನನ	:	4 ಜನವರಿ 1934 ಕೋಗನೂರ, ತಾ. ಶಿರಹಟ್ಟಿ ಜಿ. ಗದಗ
ತಂದೆ	:	ಗುರುಪಾದಯ್ಯ
ತಾಯಿ	:	ಫಕ್ಕೀರವ್ವ
ಶಿಕ್ಷಣ	:	ಮುನಸಿಪಲ್ ಹೈಸ್ಕೂಲ್, ಗದಗ (S.S.C)
ಕಲಾ ಶಿಕ್ಷಣ	:	ವಿಜಯ ಕಲಾಮಂದಿರ ಗದಗ ನೂತನ ಕಲಾ ಮಂದಿರ, ಮುಂಬೈ
ಕಲಾಗುರುಗಳು	:	ಶ್ರೀ ಎ.ಎಂ. ಛಟ್ಟಿ, ಶ್ರೀ ಸಿ.ಎನ್. ಪಾಟೀಲ ಶ್ರೀ ಟಿ.ಪಿ. ಅಕ್ಕಿ, ಶ್ರೀ ಜಿ.ಎಸ್. ದಂಡಾವತಿಮಠ, ಶ್ರೀ ಕೆ.ಕೆ. ಹೆಬ್ಬಾರ ಶುಕ್ಲಾ, ಶ್ರೀ ಭೋಸಲೆ, ಶ್ರೀ ಧೂಪೇಶ್ವರಕರ, ಶ್ರೀ ಅಲಮೇಲಕರ, ಶ್ರೀ ಎಂ.ಆರ್. ಅಚರೇಕರ

ಪ್ರಶಸ್ತಿಗಳು

1956	-	ಡ್ರಾಯಿಂಗ್ ಶಿಕ್ಷಕರ ಪರೀಕ್ಷೆಯಲ್ಲಿ ಮುಂಬೈ ರಾಜ್ಯಕ್ಕೆ ದ್ವಿತೀಯ ಸ್ಥಾನ, 'ಸ್ಟಿಲ್ ಲೈಫ್' ತೈಲಚಿತ್ರದಲ್ಲಿ ದ್ವಿತೀಯ ಬಹುಮಾನ (1958)
1960	-	ಶ್ರೀ ಬಸವಲಿಂಗಸ್ವಾಮಿ ನವಲಗುಂದ ಅವರಿಂದ ಸಾರ್ವಜನಿಕ ಸತ್ಕಾರ
1976	-	ಜಿ.ಡಿ. ಮಾಡೆಲಿಂಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ
1974	-	'ಮೆಸೇಜ್' ಮತ್ತು 'ಭಾರ್ಗವ ಪರಶುರಾಮ' ಚಿತ್ರಗಳಿಗೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಬಹುಮಾನ

ಮತ್ತು ಪ್ರಶಸ್ತಿಗಳು. 1985 ಕಲೋಪಾಸಕ ಶ್ರೀ ಎಂ.ಜಿ. ವಾಚೇದಮಠ ಪುಸ್ತಕ ಪ್ರಕಟ.

ಕಲಾ ಪ್ರದರ್ಶನಗಳು

* 'ಬಸವರೂಪ ದರ್ಶನ' ಸವದತ್ತಿ (17-12-65)
* 'ಗಾಂಧೀ ದರ್ಶನ' ಸವದತ್ತಿ (21-12-69)
* 'ಇಪ್ಪತ್ತು ಅಂಶಗಳ ಕಾರ್ಯಕ್ರಮ' ಧಾರವಾಡ (26-1-1969)
* ಏಕವ್ಯಕ್ತೀಯ ಪ್ರದರ್ಶನ, ಹುಬ್ಬಳ್ಳಿ (18-9-1992)

ಸೇವೆ

